




★ E-Bengaluru Beragu ★

MAG (2) PRB/CR/36/24-25
T/KN2024/2076


# ಈ-ಬೆಂಗಳೂರು ಬೆರಗು


ಸಂಪುಟ: 2 Vol: 2 ಸಂಚಿಕೆ: 2 Issue: 2 ಜೂನ್ 15 -30 ಪುಟಗಳು: 12 Pages: 12 ಬೆಲೆ: 15.00 ರೂ.


## ಐಪಿಎಲ್ ಸಂಭ್ರಮ ಮತ್ತು ಸರ್ಕಾರದ ವೈಫಲ್ಯ



## ಎಲ್ಲರಿಗೂ ದಾರಿದೀಪ ಸರ್. ಎಂ.ವಿ. ಜೀವನ



## ಮೈಸೂರ್ ಸ್ಯಾಂಡಲ್ ವಿವಾದ: ನಟಿ ತಮನ್ನ ರಾಯಭಾರಿಕೆಗೆ 6 ಕೋಟಿ





## ಅಯೋಧ್ಯೆಯಲ್ಲಿ ಶ್ರೀರಾಮನ ದರ್ಬಾರ್



ಈ–ಬೆಂಗಳೂರು ಬೆರಗು
E-Bengaluru Beragu





| | | | | |
|---|---|---|---|---|
| 1. ಪತ್ರಿಕಾ ಸುದ್ದಿ | 2. ಬೆರಗು ಚುಂಬಕ | 3. ಸಾಹಿತ್ಯ | 4. ಸಂಗೀತ | 5. ಸಭೆಗಳು |
| 6. ಸಮಾರಂಭ | 7. ಇತಿಹಾಸ ಪುಟಗಳಿಂದ | 8. ಆರೋಗ್ಯ ಮತ್ತು ವೈದ್ಯಕೀಯ | 9. ಮಾಧ್ಯಮ ಸುದ್ದಿ | 10. ಜ್ಞಾನ–ವಿಜ್ಞಾನ–ಪರಿಜ್ಞಾನ |
| 11. ಆಡಳಿತ ಸುದ್ದಿ | 12. ಯೂಟೂಬ್ ಲೋಕ | 13. ಜಾಲತಾಣ ಬೆರಗು | 14. ಸಿನಿಮಾ ರಂಗ | 15. ಕ್ರೀಡಾರಂಗ |



## ಮುನ್ನುಡಿ

**ವಿ**ಶಾಲ ಕರ್ನಾಟಕದ ಕನ್ನಡ ಓದುಗ ಅಭಿಮಾನಿಗಳಲ್ಲಿ ವಿನಂತಿಯ ಬಿನ್ನಹ..........

ಕನ್ನಡ ನಾಡಿನ ಸಹೃದಯ ಅಕ್ಷರ ಮಿತ್ರರ ಪ್ರೇರೇಪಣೆಯಿಂದ ಉದಯವಾಗಿ ಅತ್ಯಂತ ಸ್ಪರ್ಧಾತ್ಮಕ ಮುದ್ರಣ ಪ್ರಪಂಚ/ಜಾಲತಾಣ ಮಾಧ್ಯಮದಲ್ಲಿ ಶ್ರಮವಹಿಸಿ ಹೊರತರುತ್ತಿರುವ ನಮ್ಮ ಈ ಪ್ರಯತ್ನ ಯಶಸ್ವಿಯಾಗಲು ಉತ್ಸಾಹಿ ಹೃದಯಗಳಲ್ಲಿ ಈ ಬೆಂಗಳೂರು ಬೆರಗು ಪಾಕ್ಷಿಕ ಪತ್ರಿಕೆಯನ್ನು ಪ್ರೋತ್ಸಾಹಿಸುವಂತೆ **'ಈ ಬೆಂಗಳೂರು ಬೆರಗು'** ತಂಡದ ಪರವಾಗಿ ಕೋರುತ್ತೇವೆ.

ದಿನದ, ವಾರದ, ತಿಂಗಳ ಟ್ಯಾಬ್‌ಲಾಡ್ ಸರಳಿ ಪ್ರಚುರವಾಗಿ ಮಾರುಕಟ್ಟೆಯಲ್ಲಿ ಬಿಡುಗಡೆಯಾಗುತ್ತಿರುವ ಈ ಕಠಿಣ ಸಮಯದಲ್ಲಿ, ಪ್ರತಿ ತಿಂಗಳಲ್ಲಿ ಎರಡು ಪಾಕ್ಷಿಕಗಳನ್ನು ನಿಖರವಾಗಿ ಹದಿನೈದನೇ ದಿನವೇ ಅಂದರೆ ಪ್ರತಿ ತಿಂಗಳು 1ನೇ ದಿನಾಂಕ ಹಾಗೂ 16ನೇ ದಿನಾಂಕದಿಂದ ಬಿಡುಗಡೆ ಮಾಡಲು ಸಿದ್ಧಪಡಿಸಿ ತಮ್ಮ ಮುಂದಿಡಲೂ ಪ್ರಯತ್ನಿಸಲಾಗುವುದು.

ಈ ಸಮಕಾಲೀನ ಮುಕ್ಕಾಲು ಪಾಲು ಟ್ಯಾಬ್‌ಲಾಡ್‌ಗಳಲ್ಲಿ ಸಂಚಲನಾತ್ಮಕ ಸುದ್ದಿಗೆ, ಕೊಲೆ, ರಾಜಕೀಯ ವೈಷಮ್ಯ ಹೊಡೆಬಡೆದಾಟಗಳ ದಾಟಿಯಲ್ಲಿ ಬರಹ ಮತ್ತು ಲೇಖನಗಳಿಗೆ ಆದ್ಯತೆ ನೀಡಿ ರಂಗು ರಂಗಾದ ವಿಷಯಗಳನ್ನು ಮುದ್ರಿಸಿ ಸ್ಪರ್ಧೆ ಏರ್ಪಟ್ಟಿರುವ ಮಾರುಕಟ್ಟೆಯಲ್ಲಿ ಗಮನ ಸೆಳೆಯಲು ಇದಕ್ಕೆ ಭಿನ್ನವಾಗಿ ನಮ್ಮ ಈ ಬೆಂಗಳೂರು ಬೆರಗು ಹೊರತರಲು ಪ್ರಯತ್ನಿಸುತ್ತಿದ್ದೇವೆ.

ಆದರೆ ನಮ್ಮ ಈ ಪಾಕ್ಷಿಕ ಸಾಧ್ಯವಾದ ಮಟ್ಟಿಗೆ ಅಂತಹ ಸಂಚಲನ, ಕ್ರೈಂ, ಸೆಕ್ಸ್ ಉನ್ಮಾದ ವಿಷಯಗಳ ಆದ್ಯತೆ ನೀಡದೆ ಪ್ರಕೃತಿ, ಪ್ರೇಮ, ಸಾಹಿತ್ಯ–ಸಂಗೀತ ಲೇಖನ ಹಾಗೂ ಚಿತ್ರಗಳಿಗೆ ಆದ್ಯತೆ ನೀಡಿ ಪ್ರಚಾರ ಮಾಡಲು ಪ್ರಯತ್ನಿಸುತ್ತೇವೆ. ಈ ಪ್ರಯತ್ನಕ್ಕೆ ಸುವಿಶಾಲ ಬೆಂಗಳೂರು ಮತ್ತು ಸಹೃದಯ ಕನ್ನಡ ಓದುಗರ ಪ್ರೀತಿ, ವಿಶ್ವಾಸ, ಪ್ರೋತ್ಸಾಹ ಹಾಗೂ ಆರ್ಶೀವಾದಗಳ ಸದಾ ನಮ್ಮ ಮೇಲಿರಲಿ ಎಂದು ಬಯಸುತ್ತಾ.

ಸದಾ ನಿಮ್ಮ ಸೇವೆಯಲ್ಲಿ
**ಸಂಪಾದಕರ ಸಲಹಾ ಮಂಡಳಿ**

## ಡಿಜಿಟಲ್ ವಂಚನೆಗೆ ಆರ್‌ಬಿಐ ತಡೆ

**ಇ**ತ್ತೀಚೆಗೆ ಜಾಗತಿಕ ಮಟ್ಟದಲ್ಲೂ ಮತ್ತು ಭಾರತದಲ್ಲೂ ಜಾಲತಾಣಗಳ ಮೂಲಕ ವ್ಯಾಪಕವಾದ ಹಣಕಾಸಿನ ವಂಚನೆಗಳು ವರದಿಯಾಗುತ್ತಿದ್ದು ಲಕ್ಷಾಂತರ ಜನರ ಕೋಟ್ಯಾಂತರ ರೂಪಾಯಿಗಳು ಕ್ಷಣಮಾತ್ರದಲ್ಲಿ ತಮ್ಮ ತಮ್ಮ ಬ್ಯಾಂಕ್ ಖಾತೆಗಳಿಂದ ವಂಚಕರ ಖಾತೆಗೆ ವರ್ಗಾವಣೆಯಾಗಿ ನಷ್ಟವುಂಟಾಗಿರುತ್ತದೆ. ಈ ಸೈಬರ್ ಅಪರಾಧಗಳ ಹಿನ್ನೆಲೆಯಲ್ಲಿ ಭಾರತ ಸರ್ಕಾರವು ಪ್ರಧಾನಮಂತ್ರಿಯವರ ನೇತೃತ್ವದ ಸಚಿವ ಸಂಪುಟದಲ್ಲಿ ನಿರ್ಣಯಿಸಿದಂತೆ ಈ ಡಿಜಿಟಲ್ ಹಣಕಾಸಿನ ವ್ಯವಹಾರಗಳಿಗೆ ರಕ್ಷಣೆ ಸ್ಪರ್ಶ ನೀಡುವ ಕಾರ್ಯಕ್ರಮ ಹಮ್ಮಿಕೊಂಡಿದ್ದು ಇದರ ಭಾಗವಾಗಿ ಭಾರತ ರಿಸರ್ವ್ ಬ್ಯಾಂಕ್ ತನ್ನ ಸುಪರ್ದಿಯಲ್ಲಿ ಬರುವ ಎಲ್ಲಾ ಹಣಕಾಸು ವ್ಯವಹಾರಗಳಿಗೆ ತಡೆಯೊಡ್ಡುವ ಮತ್ತು ಹೆಚ್ಚು ಸುರಕ್ಷಿತಗೊಳ್ಳಲು ಕ್ರಮಕೈಗೊಳ್ಳುತ್ತಿದೆ.

ಭಾರತದಲ್ಲಿ ಡಿಜಿಟಲ್ ಪಾವತಿ ವ್ಯವಸ್ಥೆಗಳು ವೇಗವಾಗಿ ಬೆಳೆಯುತ್ತಿದ್ದರೂ, ಇದರ ಜೊತೆಗೇ ಡಿಜಿಟಲ್ ವಂಚನೆಗಳ ಪ್ರಕರಣಗಳು ಸಹ ಹೆಚ್ಚುತ್ತಿವೆ. ಈ ಬೆನ್ನಲ್ಲೇ, ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಡಿಜಿಟಲ್ ವಂಚನೆಗಳನ್ನು ನಿಯಂತ್ರಿಸಲು ಮತ್ತು ಆನ್‌ಲೈನ್ ವ್ಯವಹಾರಗಳನ್ನು ಹೆಚ್ಚು ಸುರಕ್ಷಿತವಾಗಿಸಲು ಮಹತ್ವದ ಕ್ರಮವನ್ನು ಕೈಗೊಂಡಿದೆ.

ಆರ್‌ಬಿಐ ಪ್ರಮುಖ ಭಾರತೀಯ ಬ್ಯಾಂಕುಗಳ ಸಹಯೋಗದಿಂದ 'ಡಿಜಿಟಲ್ ಪಾವತಿ ಇಂಟೆಲಿಜೆನ್ಸ್ ಪ್ಲಾಟ್‌ಫಾರ್ಮ್' (DPIP) ಅನ್ನು ಅಭಿವೃದ್ಧಿಪಡಿಸಲು ಮುಂದಾಗಿದೆ. ಈ ವೇದಿಕೆಯು ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ (DPIP) ಆಗಿ ಕಾರ್ಯನಿರ್ವಹಿಸಲಿದೆ.

ಈ ಹೊಸ ವೇದಿಕೆಯ ಮುಖ್ಯ ಉದ್ದೇಶವೆಂದರೆ, ವಂಚನೆ ಅಪಾಯ ನಿರ್ವಹಣೆಯನ್ನು ಬಲಪಡಿಸುವುದು. ಇದು ನೈಜ–ಸಮಯದ ಗುಪ್ತಚರ ಮಾಹಿತಿ ಸಂಗ್ರಹಣೆ ಮತ್ತು ಹಂಚಿಕೆಯನ್ನು ಸುಗಮಗೊಳಿಸುತ್ತದೆ. ಇದರಿಂದಾಗಿ ವಂಚನೆಯ ಡಿಜಿಟಲ್ ವ್ಯವಹಾರಗಳನ್ನು ಪರಿಣಾಮಕಾರಿಯಾಗಿ ತಡೆಯಲು ಸಾಧ್ಯವಾಗುತ್ತದೆ. (ನೈಜ ಸಮಯದ ಗುಪ್ತಚರ ಮಾಹಿತಿ ಹಂಚಿಕೆ)

ಆರ್‌ಬಿಐನ ಈ ಉಪಕ್ರಮವು ಡಿಜಿಟಲ್ ಪಾವತಿ ಪರಿಸರ ವ್ಯವಸ್ಥೆಯಲ್ಲಿ ಭದ್ರತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಒಂದು ಪ್ರಮುಖ ಹೆಜ್ಜೆಯಾಗಿದೆ. ಡಿಪಿಐಪಿ ವೇದಿಕೆಯು ಬ್ಯಾಂಕುಗಳು ಮತ್ತು ಇತರ ಹಣಕಾಸು ಸಂಸ್ಥೆಗಳ ನಡುವೆ ವಂಚನೆ ಸಂಬಂಧಿತ ಮಾಹಿತಿಯನ್ನು ತ್ವರಿತವಾಗಿ ಹಂಚಿಕೊಳ್ಳಲು ಸಹಾಯ ಮಾಡುತ್ತದೆ. ಇದರಿಂದಾಗಿ ವಂಚಕರು ನಡೆಸುವ ಕಾರ್ಯಾಚರಣೆಗಳನ್ನು ಗುರುತಿಸಲು ಮತ್ತು ತಡೆಯಲು ಸುಲಭವಾಗುತ್ತದೆ.

## ಆರ್‌ಬಿಐ ಇನ್ನೋವೇಶನ್ ಹಬ್‌ಗೆ ಜವಾಬ್ದಾರಿ

ಆರ್‌ಬಿಐ ಇನ್ನೋವೇಶನ್ ಹಬ್ (RBIH) ಈ ಡಿಪಿಐಪಿ ಪ್ರೋಟೋಟೈಪ್ ಅನ್ನು ನಿರ್ಮಿಸುವ ಜವಾಬ್ದಾರಿಯನ್ನು ಹೊತ್ತಿದೆ. ಪ್ರಸ್ತುತ, 5–10 ಪ್ರಮುಖ ಬ್ಯಾಂಕುಗಳೊಂದಿಗೆ ಸಮಾಲೋಚಿಸಿ ಇದರ ಅಭಿವೃದ್ಧಿ ಕಾರ್ಯ ನಡೆಯುತ್ತಿದೆ.

ಈ ವೇದಿಕೆ ಕಾರ್ಯಾಗತಗೊಂಡ ನಂತರ, ಇದು ದೇಶದಾದ್ಯಂತ ಡಿಜಿಟಲ್ ಪಾವತಿಗಳನ್ನು ಹೆಚ್ಚು ಸುರಕ್ಷಿತವಾಗಿಸಲು ಮತ್ತು ಗ್ರಾಹಕರ ವಿಶ್ವಾಸವನ್ನು ಹೆಚ್ಚಿಸಲು ಸಹಕಾರಿಯಾಗಲಿದೆ ಎಂದು ಆರ್‌ಬಿಐ ಆಶಿಸಿದೆ. ಡಿಜಿಟಲ್ ವಂಚನೆಗಳ ವಿರುದ್ಧದ ಹೋರಾಟದಲ್ಲಿ ಇದು ಒಂದು ಗೇಮ್ ಚೇಂಜರ್ ಆಗಲಿದೆ.

**(ಮಾಹಿತಿ ಮೂಲ : ಪಿಟಿಐ)**










# ಎಲ್ಲರಿಗೂ ದಾರಿದೀಪ ಸರ್.ಎಂ.ವಿ. ಜೀವನ



**ಕ**ರುನಾಡಿನ ಹೆಮ್ಮೆಯ ಪುತ್ರ ಸರ್.ಎಂ.ವಿಶ್ವೇಶ್ವರಯ್ಯನವರ ಜನ್ಮದಿನವನ್ನು ಭಾರತದಲ್ಲಿ ಇಂಜಿನಿಯರ್‌ಗಳ ದಿನ ಎಂದು ಆಚರಿಸಲಾಗುತ್ತದೆ. ಸರ್ ಎಂ.ವಿ. ಎಂದರೇನೇ ಕರುನಾಡ ಹೆಮ್ಮೆ. ಭಾರತದ ಎಂಜಿನಿಯರಿಂಗ್ ಪಿತಾಮಹರೆಂದು ಮತ್ತು ಕರುನಾಡಿನ ಹೆಮ್ಮೆಯ ಪುತ್ರ. ಭಾರತ ದೇಶದ ಶ್ರೇಷ್ಠ ಆಸ್ತಿ. ಭಾರತ ಕಂಡ ಅಪ್ರತಿಮ ಇಂಜಿನಿಯರ್ ಇವರು. ಇವರ ಇಂಜಿನಿಯರಿಂಗ್ ಕೌಶಲ್ಯ. ದೂರದರ್ಶಿತ್ವದ ಯೋಜನೆಗಳು, ಜ್ಞಾನ ಎಲ್ಲವೂ ಅದ್ಭುತ, ನಮ್ಮ ನೆಲದ ಸಾಕ್ಷಿ ಪ್ರಜ್ಞೆ ಇವರು. ಇವರ ಜೀವನ, ಆದರ್ಶ, ಸಂದೇಶಗಳು ಇಂದಿಗೂ ಎಲ್ಲರಿಗೂ ದಾರಿದೀಪ, ಇದೇ ಕಾರಣಕ್ಕೆ ಸರ್ ಎಂ.ವಿ.ಅವರ ಜನ್ಮದಿನವನ್ನು ಇಂಜಿನಿಯರ್‌ಗಳ ದಿನವನ್ನಾಗಿ ಆಚರಿಸಲಾಗುತ್ತಿದೆ.

ಸೆಪ್ಟೆಂಬರ್ 15, 1860ರಂದು ಚಿಕ್ಕಬಳ್ಳಾಪುರ ಜಿಲ್ಲೆಯ ಮುದ್ದೇನಹಳ್ಳಿಯಲ್ಲಿ ಜನಿಸಿದ ಮೋಕ್ಷಗುಂಡಂ ವಿಶ್ವೇಶ್ವರಯ್ಯರವರು 15 ವರ್ಷದವರಿದ್ದಾಗಲೇ ತಂದೆಯು ನಿಧನರಾದರು. ವಿಶ್ವೇಶ್ವರಯ್ಯನವರು ತಮ್ಮ ಪ್ರಾಥಮಿಕ ಶಿಕ್ಷಣ ಚಿಕ್ಕಬಳ್ಳಾಪುರದಲ್ಲಿ ಮತ್ತು ಪ್ರೌಢಶಿಕ್ಷಣ ಬೆಂಗಳೂರಿನಲ್ಲಿ ಮುಗಿಸಿ ಮುಂದೆ 1881 ರಲ್ಲಿ ಮದ್ರಾಸು ವಿಶ್ವವಿದ್ಯಾಲಯದಿಂದ ಬಿ.ಎ. ಪದವಿಯನ್ನು ಪಡೆದು ನಂತರ ಪುಣೆಯ ವಿಜ್ಞಾನ ಕಾಲೇಜಿನಿಂದ ಸಿವಿಲ್ ಎಂಜಿನಿಯರಿಂಗ್ ಪದವಿಯನ್ನು ಪಡೆದರು.

ವಿಶ್ವೇಶ್ವರಯ್ಯನವರು 1884ರಲ್ಲಿ ಮುಂಬಯಿ ಸರ್ಕಾರದ ಪರೀಕ್ಷೆಯಲ್ಲಿ ಉತ್ತೀರ್ಣಗೊಂಡು ಮುಂಬೈ ನಗರದಲ್ಲಿ ಲೋಕೋಪಯೋಗಿ ಇಲಾಖೆಗೆ ಇಂಜಿನಿಯರ್ ಆಗಿ ಸೇರಿದರು. ಇದಾದ ನಂತರ ಭಾರತೀಯ ನೀರಾವರಿ ಆಯೋಗದಿಂದ ಅವರಿಗೆ ಆಮಂತ್ರಣ ಬಂದಿತು. ಈ ಆಯೋಗವನ್ನು ಸೇರಿದ ನಂತರ ದಖನ್ ಪ್ರಸ್ತಭೂಮಿಯಲ್ಲೇ ಉತ್ತಮವಾದ ನೀರಾವರಿ ವ್ಯವಸ್ಥೆಯನ್ನು ವಿಶ್ವೇಶ್ವರಯ್ಯನವರು ಪರಿಚಯಿಸಿದರು. ಸರ್ ಎಂ.ವಿ.ಯವರು ಅರ್ಥರ್ ಕಾಟನ್‌ರವರಿಂದ ಬಹಳಷ್ಟು ಪ್ರಭಾವಿತರಾಗಿದ್ದರು. ಕಾವೇರಿ ನದಿಗೆ ಅಣೆಕಟ್ಟು ಕಟ್ಟುವಲ್ಲಿ ಯೋಜನೆ ಕನಸು ರೂಪಿಸತೊಡಗಿದರು.

1908ರಲ್ಲಿ ಸ್ವಯಂ–ನಿವೃತ್ತಿ ಘೋಷಿಸಿದ ವಿಶ್ವೇಶ್ವರಯ್ಯನವರು ನಂತರ ಮೈಸೂರು ಅರಸರಾದ ನಾ.ಕೃ. ಒಡೆಯರವರ ಆಹ್ವಾನದ ಮೇರೆಗೆ ಸಂಸ್ಥಾನಕ್ಕೆ ದಿವಾನರಾಗಿ ಸೇವೆ ಸಲ್ಲಿಸಲು ಮುಂದಾದರು. ಮಹಾರಾಜ ಕೃಷ್ಣರಾಜ ಒಡೆಯರ್ ಅವರ ಜೊತೆ ಮೈಸೂರು ರಾಜ್ಯದ ಸರ್ವತೋಮುಖ ಬೆಳವಣಿಗೆಗೆ ಹಲವಾರು ಯೋಜನೆಗಳು ರೂಪಿಸಿ ಮೈಸೂರು ರಾಜ್ಯವನ್ನು ಮಾದರಿ ರಾಜ್ಯವನ್ನಾಗಿ ಮಾಡುವಲ್ಲಿ ಅತ್ಯದ್ಭುತವಾಗಿ ಕೆಲಸ ಮಾಡಿದರು. 1917ರಲ್ಲಿ ಬೆಂಗಳೂರಿನಲ್ಲಿ ಸರ್ಕಾರಿ ಎಂಜಿನಿಯರಿಂಗ್ ಕಾಲೇಜನ್ನು ಸ್ಥಾಪಿಸಿದರು. ಇದೇ ಕಾಲೇಜಿಗೆ ನಂತರ ಅವರ ಹೆಸರನ್ನೇ ಇಡಲಾಯಿತು. (ವಿಶ್ವೇಶ್ವರಯ್ಯ ಕಾಲೇಜ್ ಆಫ್ ಇಂಜಿನಿಯರಿಂಗ್). ಮೈಸೂರು ವಿಶ್ವವಿದ್ಯಾಲಯದ ಬೆಳವಣಿಗೆಗಾಗಿಯೂ ಶ್ರಮಿಸಿದರು.

ಅವರ ತಾಂತ್ರಿಕ ಕೌಶಲ್ಯವು ಅಣೆಕಟ್ಟುಗಳಲ್ಲಿ ಉಪಯೋಗಿಸಲಾದ 'ಸ್ವಯಂಚಾಲಿತ ಫ್ಲಡ್ ಗೇಟ್ ವಿನ್ಯಾಸ'ವೊಂದನ್ನು ಕಂಡು ಹಿಡಿದು ಅದಕ್ಕಾಗಿ 'ಪೇಟೆಂಟ್' ಪಡೆದರು. ಮೊದಲ ಬಾರಿಗೆ 1903ರಲ್ಲಿ ಈ ಫ್ಲಡ್ ಗೇಟ್‌ಗಳು ಪುಣೆಯ 'ಖಡಕ್ವಾಸ್ಲಾ' ಅಣೆಕಟ್ಟಿನಲ್ಲಿ ಸ್ಥಾಪಿತವಾದವು. ಇಲ್ಲಿ ಅವು ಯಶಸ್ವಿಯಾದ ನಂತರ 'ಗ್ವಾಲಿಯರ್‌ನ ಟಿಗ್ರಾ ಅಣೆಕಟ್ಟು' ಮತ್ತು ಕರ್ನಾಟಕದ 'ಕೃಷ್ಣರಾಜಸಾಗರ' ಅಣೆಕಟ್ಟುಗಳಲ್ಲಿ ಸಹ ಉಪಯೋಗಿತವಾದವು. ಈ ಗೇಟ್‌ಗಳ ಉದ್ದೇಶ ಅಣೆಕಟ್ಟಿಗೆ ಹಾನಿ ಮಾಡದೆ ಗರಿಷ್ಠ ಮಟ್ಟದ ನೀರನ್ನು ಶೇಖರಿಸಿಡುವುದೇ ಆಗಿತ್ತು. ಕೃಷ್ಣರಾಜಸಾಗರವನ್ನು ಕಟ್ಟಿದಾಗ ಅದು ಆ ಕಾಲದಲ್ಲಿ ಭಾರತದ ಅತ್ಯಂತ ದೊಡ್ಡ ಅಣೆಕಟ್ಟು. ವಿಶ್ವೇಶ್ವರಯ್ಯನವರು ದೇಶದಾದ್ಯಂತ ಪ್ರಸಿದ್ಧರಾದದ್ದು ಹೈದರಾಬಾದ್ ನಗರವನ್ನು ಪ್ರವಾಹಗಳಿಂದ ರಕ್ಷಿಸಲು ಪ್ರವಾಹ ರಕ್ಷಣಾ ವ್ಯವಸ್ಥೆಯನ್ನು ಏರ್ಪಡಿಸಿದಕ್ಕೆ ಜನ ಕೊಂಡಾಡಿದರು.

ವಿಶ್ವೇಶ್ವರಯ್ಯನವರ ಈ ಎಲ್ಲಾ ಸಾಧನೆಗಳು ಈ ಭೂಮಿ ಇರುವ ತನಕ ಶಾಶ್ವತವಾಗಿರುತ್ತವೆ. ಇವರ ದೂರದರ್ಶಿತ್ವದೊಂದಿಗೆ ರೂಪಿಸಲಾದ ಯೋಜನೆಗಳು ಇಂದಿಗೂ ವಿಶ್ವೇಶ್ವರಯ್ಯನವರ ಸಾಧನೆ, ಬುದ್ಧಿವಂತಿಕೆಗೆ ಸಾಕ್ಷಿಯಾಗಿ ನಿಂತಿವೆ. ಈ ದೇಶಕ್ಕೆ ಸರ್ ಎಂ.ವಿ. ಅವರು ನೀಡಿದ ಕೊಡುಗೆ ಅಪೂರ್ವ. ಕಾವೇರಿಗೆ ಅಡ್ಡಲಾಗಿ ಮಂಡ್ಯ ಜಿಲ್ಲೆಯಲ್ಲಿ ಕಟ್ಟಲಾದ ಕೃಷ್ಣರಾಜ ಸಾಗರ ಅಣೆಕಟ್ಟು ಸರ್ ಎಂ.ವಿಶ್ವೇಶ್ವರಯ್ಯನವರ ಬುದ್ಧಿವಂತಿಕೆ, ಯೋಜನಾ ನೈಪುಣ್ಯ ಮತ್ತು ಶ್ರಮದ ಫಲ. ಸರ್ ಎಂ.ವಿಶ್ವೇಶ್ವರಯ್ಯನವರ ಸಾಧನೆಗೆ 1961ರಲ್ಲಿ ಅಂದಿನ ಭಾರತ ಸರ್ಕಾರವು ಪ್ರಧಾನಿ ಜವಹರಲಾಲ್ ನೆಹರೂ ಅವರ ನಿರ್ಧಾರ ಮತ್ತು ಅಪಾರ ಆಸಕ್ತಿಯಿಂದ 'ಭಾರತರತ್ನ' ಬಿರುದನ್ನು ಅತ್ಯಂತ ಗೌರವವಾಗಿ ನೀಡಲಾಯಿತು.

# ಅಯೋಧ್ಯೆಯಲ್ಲಿ ಶ್ರೀರಾಮನ ದರ್ಬಾರ್



**ಉ**ತ್ತರ ಪ್ರದೇಶದ ಅಯೋಧ್ಯೆ (Ayodhya) ಯಲ್ಲಿರುವ ರಾಮ ಮಂದಿರದಲ್ಲಿ ಶ್ರೀ ರಾಮನ ಎರಡನೇ ಪ್ರಾಣ ಪ್ರತಿಷ್ಠಾ ಸಮಾರಂಭವು ಮತ್ತು ರಾಮ ದರ್ಬಾರ್ ಪ್ರಾಣ ಪ್ರತಿಷ್ಠಾ ಕಾರ್ಯಕ್ರಮ ತುಂಬಾ ಶ್ರದ್ಧಾಭಕ್ತಿಯಿಂದ ಶಾಸ್ತ್ರೋಕ್ತವಾಗಿ ಜೂನ್ 3 ರಂದು ನಡೆಯಿತು. ಈ ಪವಿತ್ರ ಸಮಾರಂಭದಲ್ಲಿ ಶ್ರೀರಾಮ ಜನ್ಮಭೂಮಿ ಸಂಕೀರ್ಣದೊಳಗೆ ರಾಜಾ ರಾಮ ಮತ್ತು ಇತರ ದೇವತೆಗಳ ಪ್ರತಿಷ್ಠಾಪನೆ ನಡೆದಿದ್ದು, ಇದೇ ಸಂದರ್ಭದಲ್ಲಿ ರಾಮ ಜನ್ಮಭೂಮಿ ದೇವಸ್ಥಾನದ ಮೊದಲ ಮಹಡಿಯಲ್ಲಿರುವ ರಾಮ ದರ್ಬಾರ್‌ನ ಎಂಟು ದೇವಾಲಯಗಳು, ಪಾರ್ಕೋಟಾ, ಶಿವಲಿಂಗ, ಗಣಪತಿ, ಹನುಮಾನ್, ಸೂರ್ಯ, ಭಗವತಿ ಮತ್ತು ಅನ್ನಪೂರ್ಣ ಆರು ದೇವಾಲಯಗಳು ಮತ್ತು ಶೇಷಾವತಾರ ದೇವಾಲಯದಲ್ಲಿರುವ ದೇವತೆಗಳ ವಿಗ್ರಹಗಳ ಪ್ರಾಣ ಪ್ರತಿಷ್ಠಾನ ನಡೆಯಿತು. ಅಂದು ರಾಮ ದೇವಾಲಯವನ್ನು ಸುಂದರವಾದ ದೀಪಗಳಿಂದ ಅಲಂಕರಿಸಲಾಗಿ ನೆರೆದ ಸಹಸ್ರಾರು ಭಕ್ತರ ಕಣ್ಮನ ಭಕ್ತಿ ಪಾರವಶ್ಯಕ್ಕೆ ಕೊನೆಯೇ ಇಲ್ಲದಂತಾಯಿತು.

ಗರ್ಭಗುಡಿಯ ಮೇಲೆ ಇರುವ ಬಂಗಾರದ ಶಿಖರವು ಪಾವಿತ್ರ್ಯತೆ, ಪ್ರಗತಿ ಮತ್ತು ಭಕ್ತಿಯ ಸಂಕೇತವಾಗಿದೆ. ಹಲವಾರು ಕಿ.ಮೀ.ಗಳ ದೂರಕ್ಕೂ ಗೋಚರಿಸುತ್ತಿರುವ ಈ ನಯನ ಮನೋಹರ ಗುಮ್ಮಟವು ಭಕ್ತರ ಕಣ್ಮನ ತಣಿಸುತ್ತಿದೆ ಮತ್ತು ಬರುತ್ತಿರುವ ಭಕ್ತರ ಭಕ್ತಿ–ಭಾವವನ್ನು ಇಮ್ಮಡಿಗೊಳಿಸುತ್ತಿದೆ.

ದಶಮಿಯ ಪವಿತ್ರ ದಿನವಾದ ಅಂದು ಅಯೋಧ್ಯೆಯ (Ayodhya) ಶ್ರೀ ರಾಮ ಜನ್ಮಭೂಮಿ ಮಂದಿರದಲ್ಲಿ ಶ್ರೀ ರಾಮ ದರ್ಬಾರ್‌ನ (Rama Darbar) ಪ್ರಾಣ ಪ್ರತಿಷ್ಠಾ ಮಹೋತ್ಸವ ವಿಜೃಂಭಣೆಯಿಂದ ನೆರವೇರಿ ಮೂರು ದಿನಗಳ ಧಾರ್ಮಿಕ (Spiritual) ಆಚರಣೆಗಳ ಅಂತಿಮ ದಿನ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ (Yogi Adityanath) ಈ ಧಾರ್ಮಿಕ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.

ತದನಂತರ ಲಕ್ಷ ಲಕ್ಷ ಭಕ್ತರು ತಂಡೋಪತಂಡವಾಗಿ ಅಯೋಧ್ಯ ರಾಮಮಂದಿರ ಮತ್ತು ನೂತನವಾಗಿ ಉದ್ಘಾಟನೆಗೊಂಡ ದೇವಸ್ಥಾನ ಪ್ರಾಂಗಣದ ಇತರೆ ಎಲ್ಲಾ ಗುಡಿಗಳನ್ನು ಸಂದರ್ಶಿಸಿ ಭಕ್ತಿಪುನೀತರಾಗುತ್ತಿದ್ದಾರೆ.

ಈ ಕಾರ್ಯಕ್ರಮವು ಎಲ್ಲ ಜನರ ಸಹಕಾರ ಶ್ರೀ ರಾಮ ನ್ಯಾಸ ಭಕ್ತಿ ಮಂಡಳಿ ಮತ್ತು ಉತ್ತರ ಪ್ರದೇಶ ಸರ್ಕಾರದ ಸಹಕಾರ ಸಹಯೋಗದಿಂದ ತುಂಬಾ ವಿಜೃಂಭಣೆಯಿಂದ ಅತ್ಯಂತ ಯಶಸ್ವಿಯಾಗಿ ನ ಭೂತೆ ನ ಭವಿಷ್ಯತೆ ಎಂಬ ರೀತಿಯಲ್ಲಿ ನಡೆಯಿತು.

# ಐಪಿಎಲ್ ಸಂಭ್ರಮ ಮತ್ತು ಸರ್ಕಾರದ ವೈಫಲ್ಯ



**ಕ**ನ್ನಡಿಗರ ನಾಡು ಕರ್ನಾಟಕದಲ್ಲಿ ಕ್ರಿಕೆಟ್ ಆಟವನ್ನು ತುಂಬಾ ಪ್ರೀತಿಸುತ್ತಾರೆ ಮತ್ತು ಆದರಿಸುತ್ತಾರೆ. ಅದರಲ್ಲೂ ನಮ್ಮ ಬೆಂಗಳೂರಿನ ಪ್ರತಿಭಾನ್ವಿತ ಕ್ರಿಕೆಟ್ ಕಲಿಗಳು ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರತಿಭೆಯಿಂದ ಭಾರತ ತಂಡವನ್ನು ಪ್ರತಿನಿಧಿಸಿ ಹಲವಾರು ಭಾರತದ ಗೆಲುವಿನ ರುವಾರಿಗಳಾಗಿರುತ್ತಾರೆ. 75 ವರ್ಷಗಳಿಂದಲೂ ವಿಶೇಷವಾಗಿ ಬಿ.ಎಸ್.ಚಂದ್ರಶೇಖರ್, ಬುದ್ಧಿ ಕುಂದರಮ್, ಯರ್‍ರಪಳ್ಳಿ ಪ್ರಸನ್ನ, ಜಿ.ಆರ್. ವಿಶ್ವನಾಥ್, ಬ್ರಿಜೇಶ್ ಪಟೇಲ್, ರಾಹುಲ್ ದ್ರಾವಿಡ್, ಸುನೀಲ್ ಜೋಶಿ, ಅನಿಲ್ ಕುಂಬ್ಳೆ, ರಾಬಿನ್ ಉತ್ತಪ್ಪ, ಸದಾನಂದ ವಿಶ್ವನಾಥ್, ಸಯ್ಯದ್ ಕಿರ್ಮಾನಿ ಮುಂತಾದ ಕ್ರೀಡಾಪಟುಗಳು ಭಾರತ ತಂಡದಲ್ಲಿ ಪ್ರಜ್ವಲಿಸಿದ್ದು ಇಂದಿಗೂ ಕೆ.ಎಲ್. ರಾಹುಲ್, ಕರುಣ್ ನಾಯರ್, ವೈಶಾಖ್ ವಿಜಯ್‌ಕುಮಾರ್, ಪ್ರಸಿದ್ಧಿ ಕೃಷ್ಣ ಮತ್ತು ಮನೀಶ್ ಅಗರ್‌ವಾಲ್ ಪ್ರತಿಭಾ ಪಟುಗಳಾಗಿ ವಿಜೃಂಭಿಸುತ್ತಿದ್ದಾರೆ. ಈ ಮಧ್ಯೆ 20–20 ಪಂದ್ಯಗಳಲ್ಲಿ ಐಪಿಎಲ್ ಸರಣಿಯಲ್ಲಿ ಬೆಂಗಳೂರು ಪ್ರತಿನಿಧಿಸುವ ಆರ್‌ಸಿಬಿ ತಂಡವನ್ನು ವಿಜಯ ಮಲ್ಯರವರು 2008ರಲ್ಲಿ ಪ್ರಾಯೋಜಿಸಿದ್ದು ಉತ್ತಮ ಪ್ರದರ್ಶನದ ಮೂಲಕ ಹಲವಾರು ಪಂದ್ಯಗಳನ್ನು ಗೆಲ್ಲುತ್ತಿದ್ದು 17 ವರ್ಷಗಳಲ್ಲಿ ನಾಲ್ಕು ಬಾರಿ ಫೈನಲ್ ಹಂತವನ್ನು ತಲುಪಿ ಗೆಲ್ಲುವ ಹಂತದಲ್ಲಿ ಎಡವಿ ಟ್ರೋಫಿ ಗೆಲ್ಲದೆ ನಿರಾಶೆಯುನ್ನುಂಟು ಮಾಡಿರುತ್ತಾರೆ. ಆದರೂ ಆರ್‌ಸಿಬಿ ತಂಡಕ್ಕೆ ಬೆಂಗಳೂರಿನ ಅಭಿಮಾನಿಗಳು ಸಂಪೂರ್ಣ ಬೆಂಬಲ ಹಾಗೂ ನೈತಿಕ ಸ್ಥೈರ್ಯವನ್ನು ನೀಡುತ್ತಲೇ ಬಂದು ಈ ಸಲ ಕಪ್ ನಮ್ಮದೇ ಎಂಬ ಧ್ಯೇಯ ವಾಕ್ಯದೊಂದಿಗೆ ಪ್ರೋತ್ಸಾಹಿಸಿ ಜೈಕಾರಗಳನ್ನು ಕೂಗುತ್ತಾ ಪ್ರತಿಪಂದ್ಯದಲ್ಲು ಕಾತರತೆ ಮತ್ತು ಉತ್ಸಾಹದಿಂದ ತಂಡದ ಎಲ್ಲಾ ಸದಸ್ಯರನ್ನು ಹುರಿದುಂಬಿಸುತ್ತಿದ್ದರು.

ಆದರೆ ನಮ್ಮ ಬೆಂಗಳೂರು ತಂಡ ಆರ್‌ಸಿಬಿ ಹೆಸರನ್ನು ಹೃದಯದಲ್ಲಿ ಇಟ್ಟುಕೊಂಡು ಪೂಜೆ ಮಾಡುತ್ತಿದ್ದು 7 ಕೋಟಿ ಕನ್ನಡಿಗರ ಆಸೆಯು ಕಳೆದ 18 ವರ್ಷಗಳಿಂದ ನಮ್ಮ ಆರ್‌ಸಿಬಿ ತಂಡ ಕಪ್ ಗೆಲ್ಲಬೇಕೆಂಬ ಕನಸು ನನಸಾಗುತ್ತದೆ ಎಂದು ಕಾಯುತ್ತಿದ್ದ ಅಭಿಮಾನಿ ಗಳಿಗೆ ಮೇ 27 ರಂದು ನಡೆದ ಫಸ್ಟ್ ಸೆಮಿ ಫೈನಲ್‌ನಲ್ಲೇ ದೊಡ್ಡ ಸಂಭ್ರಮದ ಸುದ್ದಿ ಸಿಕ್ಕಿತ್ತು. ಜೂನ್ 3 ಮಂಗಳವಾರ ರಾತ್ರಿ ಅಂತಿಮ ಪಂದ್ಯದಲ್ಲಿ ನಮ್ಮ ಬೆಂಗಳೂರು ತಂಡವು ಪಂಜಾಬ್ ಕಿಂಗ್ಸ್ ತಂಡವನ್ನು 6 ರನ್‌ಗಳಿಂದ ರೋಚಕ ಘಟ್ಟದಲ್ಲಿ ಸೋಲಿಸಿ ಕಪ್ ಗೆದ್ದು ಹೊಸ ಇತಿಹಾಸ ನಿರ್ಮಾಣ ಮಾಡಿತು.

ಈ ಗೆಲುವಿನಿಂದ ಆರ್‌ಸಿಬಿ ತಂಡವನ್ನು ಕಣ್ತುಂಬಿಕೊಳ್ಳುವ ತವಕ ಸಹಜವಾಗಿಯೇ ಅಭಿಮಾನಿಗಳಲ್ಲಿ ಮೂಡಿ ಗುಜರಾತ್‌ನ ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಐಪಿಎಲ್ ಅಂತಿಮ ಪಂದ್ಯದ ಟಾಸ್ ಪ್ರಕ್ರಿಯೆ ಆರಂಭವಾಗುವ ಹೊತ್ತಿನಲ್ಲೇ ವಿಜಯೋತ್ಸವ ಆಚರಣೆ ಮಾಡುವ ಬಗ್ಗೆ ಉನ್ಮಾದ ಮತ್ತು ಉತ್ಸಾಹ ತುಂಬಿ ಹರಿಯುತ್ತಿತ್ತು. ಏತನ್ಮಧ್ಯೆ 18 ವರ್ಷಗಳ ನಂತರ ಕಪ್ ಗೆದ್ದ ಆರ್‌ಸಿಬಿ ತಂಡಕ್ಕೆ ಇಡೀ ರಾತ್ರಿ ದೇಶದ ಮೂಲೆ ಮೂಲೆಗಳಿಂದಲೂ ಹತ್ತಾರು ಪಟ್ಟಣ–ನಗರಗಳಲ್ಲಿ ಆರ್‌ಸಿಬಿ ಅಭಿಮಾನಿಗಳ ವಿಜಯದ ಸಂಭ್ರಮವನ್ನು ಬೆಳಗಿನ ಹೊತ್ತಿನವರೆಗೂ ಆಚರಿಸುತ್ತಲೇ ಇದ್ದರು. ಈ ಉನ್ಮಾದವು ಬೆಂಗಳೂರಿನ ರಾಜಕೀಯ ಆಯಕಟ್ಟಿನ ನಾಯಕರು, ಕೆ.ಎಸ್.ಸಿ.ಎ. ಮತ್ತು ಆರ್‌ಸಿಬಿ ತಂಡದ ಉಸ್ತುವಾರಿ ಹೊತ್ತಂತಹ ಅಧಿಕಾರಿಗಳು ಜಯದ ಆನಂದದಲ್ಲಿ ವಿಜಯೋತ್ಸವ ಆಚರಿಸಲು ನಿರ್ಧರಿಸಿದರು.

ಇದರ ಬೆನ್ನಲ್ಲೇ, ಉಪಮುಖ್ಯಮಂತ್ರಿಯವರ ಹೇಳಿಕೆ, ಅದರ ಬೆನ್ನಲ್ಲೇ ಮುಖ್ಯಮಂತ್ರಿಯವರ 'ಎಕ್ಸ್' ಹೇಳಿಕೆಗಳು ಹೊರಬಿದ್ದು, ವಿಧಾನಸೌಧದ ಮೆಟ್ಟಿಲಿನ ಮೇಲೆ ಆರ್‌ಸಿಬಿ ತಂಡವನ್ನು ಸನ್ಮಾನಿಸುವ ಸುದ್ದಿ ಕಾಳ್ಗಿಚ್ಚಿನಂತೆ ಹಬ್ಬಿತು. ಎಚ್‌ಎಎಲ್ ವಿಮಾನ ನಿಲ್ದಾಣಕ್ಕೆ ವಿಶೇಷ ವಿಮಾನದಲ್ಲಿ ಬಂದಿಳಿದ ಆರ್‌ಸಿಬಿ ತಂಡವನ್ನು ಎದುರುಗೊಳ್ಳಲು ಅಲ್ಲಿಗೆ ತೆರಳಿದ ಉಪಮುಖ್ಯಮಂತ್ರಿಯವರು ಆಟಗಾರರನ್ನು ವಿಶೇಷ ಭದ್ರತೆಯಡಿ ನಗರಕ್ಕೆ ಕರೆತಂದರು.

ಈ ವಿಡಿಯೊ, ಭಾವಚಿತ್ರಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದವು. ಬೆಂಗಳೂರು ನಗರ ಹಾಗೂ ಸುತ್ತಮುತ್ತಲಿನ ಜಿಲ್ಲೆಗಳಿಂದ ಸಾಗರೋಪಾದಿಯಲ್ಲಿ ಅಭಿಮಾನಿಗಳು ನಗರದ ಹೃದಯ ಭಾಗದತ್ತ ನುಗ್ಗಲು ಇದು ಪ್ರಮುಖ ಕಾರಣವಾಯಿತು.





ಬೆಳಗಾಗುವಷ್ಟರಲ್ಲಿ ಆರ್‌ಸಿಬಿ ಫ್ರಾಂಚೈಸಿ ತನ್ನ ಅಧಿಕೃತ 'ಎಕ್ಸ್' ಖಾತೆಯಲ್ಲಿ ಸಕ್ಷಮ ಪ್ರಾಧಿಕಾರದಿಂದ ಯಾವುದೇ ಅನುಮತಿ ಪಡೆಯದೇ ಇದ್ದರೂ ಬುಧವಾರ ಮಧ್ಯಾಹ್ನ ವಿಧಾನಸೌಧದ ಮೆಟ್ಟಿಲ ಮೇಲೆ ಸರ್ಕಾರದಿಂದ ಸನ್ಮಾನ ಮತ್ತು ಸಂಜೆ ಕ್ರೀಡಾಂಗಣದಲ್ಲಿ ವಿಜಯೋತ್ಸವ ಮತ್ತು ವಿಧಾನಸೌಧದಿಂದ ಕ್ರೀಡಾಂಗಣದವರೆಗೆ ವಿಕ್ಟರಿ ಪರೇಡ್‌ಗೆ (ಆಟಗಾರರ ಮೆರವಣಿಗೆ) ನಡೆಸಲು ಉದ್ದೇಶಿಸಿದ್ದು ಸಾರ್ವಜನಿಕರು ಹಾಗೂ ಅಭಿಮಾನಿಗಳು ಸೇರಬೇಕೆಂದು ಏಕಪಕ್ಷೀಯ ನಿರ್ಧಾರ ಕೈಗೊಂಡು 'ಟ್ವೀಟರ್ ಎಕ್ಸ್' ಖಾತೆಯಲ್ಲಿ ಸಂದೇಶ ರವಾನಿಸಿತು. ಈ ಸಂದೇಶದಲ್ಲಿ ಕ್ರೀಡಾಂಗಣದ ಪ್ರವೇಶಕ್ಕೆ ಉಚಿತ ಟಿಕೆಟ್ ನೀಡಲಾಗುವುದು ಎಂದು ತನ್ನ ವೆಬ್‌ಸೈಟ್‌ನಲ್ಲಿ ಆರ್‌ಸಿಬಿ ಪ್ರಕಟಣೆ ಹೊರಡಿಸಿ ಅತ್ತ ಸರ್ಕಾರವು ಪೊಲೀಸ್ ಇಲಾಖೆಯ ಸಲಹೆಯನ್ನು ಗಂಭೀರವಾಗಿ ಪರಿಗಣಿಸದೇ ವಿಧಾನಸೌಧ ಮೆಟ್ಟಿಲುಗಳ ಮೇಲೆ ಆರ್‌ಸಿಬಿ ಆಟಗಾರರನ್ನು ಸನ್ಮಾನಿಸುವುದಾಗಿ ಹೇಳಿತು.

ತರಾತುರಿಯಲ್ಲಿ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ (ಕೆಎಸ್‌ಸಿಎ) ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಕುಭೇಂದ್ ಘೋಷ್ ಅವರು ಕಬ್ಬನ್ ಪಾರ್ಕ್ ಠಾಣೆಗೆ ತೆರಳಿ, ಆರ್‌ಸಿಬಿ ತಂಡದ ವಿಜಯೋತ್ಸವ ಕಾರ್ಯಕ್ರಮವನ್ನು ಮಾಡಲು ನಿರ್ಧರಿಸಿದ್ದು ತಂಡವು ಅಂದೇ ಅಂದರೆ 4ನೇ ತಾರೀಖು ಬುಧವಾರ ಸಂಜೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಸನ್ಮಾನಿಸಲಾಗುವುದೆಂದು ತಿಳಿಸಿ ಪತ್ರವನ್ನು ನೀಡಿ ಬಂದೋಬಸ್ತ್ ವ್ಯವಸ್ಥೆ ಮಾಡುವಂತೆ ಠಾಣೆಯ ಇನ್ಸ್‌ಪೆಕ್ಟರ್ ಗಿರೀಶ್ ಅವರಿಗೆ ಮನವಿ ಮಾಡಿರುತ್ತಾರೆ.

ವಿಧಾನಸೌಧದ ಎದುರು ಆರ್‌ಸಿಬಿ ತಂಡವನ್ನು ಸನ್ಮಾನಿಸಿದರೆ ಸರ್ಕಾರದ ವರ್ಚಸ್ಸು ಹೆಚ್ಚಾಗುತ್ತದೆ ಎಂದು ಕೆಲವರು ನೀಡಿದ ಸಲಹೆ ಪಾಲಿಸಲು ಮುಂದಾದ ಆಡಳಿತಾರೂಢರು ತರಾತುರಿಯಲ್ಲಿ ಎಲ್ಲದಕ್ಕೂ ಅನುಮತಿ ಕೊಡಿಸಿದರು. ಕೆಲವೇ ಗಂಟೆಗಳಲ್ಲಿ ವೇದಿಕೆ ನಿರ್ಮಾಣಗೊಂಡು ಎಲ್ಲವೂ ಸಜ್ಜಾಯಿತು. ಮೆಟ್ಟಿಲುಗಳ ಮೇಲೆ ಹಾಕಲಾದ ವೇದಿಕೆಯಲ್ಲಿ 25–30 ಅತಿಥಿಗಳಿಗೆ ಮಾತ್ರ ಅನುಮತಿಸಬಹುದು ಎಂದು ಲೋಕೋಪಯೋಗಿ ಇಲಾಖೆ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಅವರು ವಿಧಾನಸೌಧ ಭದ್ರತಾ ವಿಭಾಗದ ಪೊಲೀಸ್ ಇನ್ಸ್‌ಪೆಕ್ಟರ್‌ಗೆ ಅಭಿಪ್ರಾಯ ನೀಡಿದ್ದರು.

ಆದರೆ ವೇದಿಕೆ ಮೇಲೆ ಸುಮಾರು 200ಕ್ಕೂ ಅಧಿಕ ಜನರು ಜಮಾವಣೆಯಾಗಿದ್ದರು. ಆರ್‌ಸಿಬಿ ತಂಡದ ಸದಸ್ಯರು ಸನ್ಮಾನಕ್ಕೆ ಬಂದು ಇಳಿದ ತಕ್ಷಣ ಮತ್ತು ಕಾರ್ಯಕ್ರಮ ನಡೆಯುವ ಹೊತ್ತಿನಲ್ಲಿಯೂ ಸಹ ಅವರ ಜೊತೆ ಫೋಟೋ, ಸೆಲ್ಫಿ ಕ್ಲಿಕ್ಕಿಸಿದ ಸಚಿವರು, ಶಾಸಕರು, ಅವರ ಕುಟುಂಬಸ್ಥರು, ಮಕ್ಕಳು ಸೇರಿ ನೂರಾರು ಜನರು ವೇದಿಕೆಯ ಮೇಲೆಯೇ ಜಮಾವಣೆಯಾಗಿದ್ದರು.

ಅಂದಹಾಗೆ ಗುಜರಾತ್ ಕ್ರೀಡಾಂಗಣದಲ್ಲಿ ಐಪಿಎಲ್ 2025 ಫೈನಲ್ ಮ್ಯಾಚ್ ಆಡಿ ಗೆದ್ದಿದ್ದ ಆರ್‌ಸಿಬಿ ತಂಡದ ಆಟಗಾರರು ಬುಧವಾರ ಬೆಂಗಳೂರಿಗೆ ಐಪಿಎಲ್ ಕಪ್ ಸಮೇತ ಬಂದಿದ್ದರು. ಹೀಗಿದ್ದಾಗ ಲಕ್ಷ ಲಕ್ಷ

**12ನೇ ಪುಟಕ್ಕೆ ಮುಂದುವರೆದಿದೆ**

# ನಿಮ್ಮ ದಿನಬಳಕೆಯ ಸಾಧನಗಳಲ್ಲೇ ಇದೇ ಬೇಹುಗಾರನ ಕಳ್ಳಗಿಂಡಿ...ಹುಷಾರ್!

## ಸ್ಮಾರ್ಟ್‌ಫೋನ್‌ಗಳಲ್ಲಿ ಕಳ್ಳಗಣ್ಣು–ಕಳ್ಳಗಿವಿ

ಸೈಬರ್ ಕ್ರೈಮ್–ಹೈಟೆಕ್ ಯುಗ ಮತ್ತು ಅತ್ಯಾಧುನಿಕ ಮಾನವನಿಗೆ ಸಂಚಕಾರವಾಗಿ ಪರಿಗಣಿಸಿದೆ. ಮಾಧ್ಯಮಗಳಲ್ಲಿ ಇದು ದಿನಿನಿತ್ಯದ ಸುದ್ದಿಗಳಾಗಿ ಕಣ್ಣಿಗೆ ರಾಚುತ್ತವೆ. ಒಂದೆಡೆ ಕಂಪ್ಯೂಟರ್ ಮತ್ತು ಕಂಪ್ಯೂಟರ್ ನೆಟ್‌ವರ್ಕ್‌ನಲ್ಲಿ ಹ್ಯಾಕರ್‌ಗಳ ಹಾವಳಿ ಹೆಚ್ಚಾಗಿದ್ದರೆ, ಮತ್ತೊಂದೆಡೆ ಮೊಬೈಲ್ ಫೋನ್‌ಗಳಲ್ಲಿ ಹೂಕರ್‌ಗಳ ಕಾಟವೂ ಅವ್ಯಾಹತವಾಗಿ ಕಾಡುತ್ತಿದೆ. ಇಸ್ರೇಲ್ ಮೂಲದ ಪೆಗಾಸಸ್ ಸಾಫ್ಟ್‌ವೇರ್ ಬಳಸಿ ದೇಶದ 300ಕ್ಕೂ ಹೆಚ್ಚು ಗಣ್ಯರು ಮತ್ತು ಪ್ರಭಾವಿಗಳ ಮಾಹಿತಿ ಸಂಗ್ರಹಿಸಿದ ಪ್ರಕರಣ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸಾಕಷ್ಟು ಚರ್ಚೆ, ವಿವಾದ ಮತ್ತು ಪ್ರತಿಭಟನೆಗಳಿಗೂ ಕಾರಣವಾಗಿದ್ದನ್ನು ಇಲ್ಲಿ ಉಲ್ಲೇಖಿಸಬಹುದು.

ಸ್ಟಾಕರ್‌ವೇರ್ ಎಂಬ ಸಾಫ್ಟ್‌ವೇರ್ ಪ್ರೋಗ್ರಾಮ್ ಅಥವಾ ಆ್ಯಪ್ ಬಳಸಿ ಲಕ್ಷ್ಯ ಇಡಲಾದ ವ್ಯಕ್ತಿಯ ಫೋನ್‌ನಿಂದಲೇ ಅವರ ಮೇಲೆ ಕಳ್ಳಗಿಂಡಿ ಮೂಲಕ ನಿಗಾ ವಹಿಸುವ ಮತ್ತು ಗೋಪ್ಯವಾಗಿ ಮಾಹಿತಿ ಸಂಗ್ರಹಿಸುವ ಪಿಡುಗು ದಿನೇ ದಿನೇ ಹೆಚ್ಚಾಗುತ್ತ ಆತಂಕ ಸೃಷ್ಟಿಸಿದೆ. ಉದ್ಯಮಿಗಳು, ಪಾಲುದಾರರು, ಉದ್ಯೋಗಿಗಳು, ಪತಿ–ಪತ್ನಿ, ಭಾವಿ ಬಾಳ ಸಂಗಾತಿಗಳು ಅಥವಾ ಗುರಿಯಾಗಿಸಿದ ಇನ್ಯಾರೋ ವ್ಯಕ್ತಿಯ ಬಗ್ಗೆ ವಾಮಮಾರ್ಗದಲ್ಲಿ ಮಾಹಿತಿ ಕಲೆ ಹಾಕಲಾಗುವ ದುರುದ್ದೇಶದ ಕಳ್ಳಗಿಂಡಿಯ ಗೂಢಚಾರಿಕೆ ಇದಾಗಿದೆ. ಖಾಸಗಿತನ ಮತ್ತು ತೀರಾ ರಹಸ್ಯ ವಿಷಯಗಳಿಗೆ ಸಂಚಕಾರ ತರುವ ಇದನ್ನು ಸ್ಪೈ ವೇರ್ ಅಥವಾ ಮಾನಿಟರಿಂಗ್ ಸಾಫ್ಟ್‌ವೇರ್ ಎಂದು ಕರೆಯಲಾಗುತ್ತದೆ. ಇದನ್ನು ಸರಳವಾಗಿ ಅರ್ಥೈಸುವುದಾದರೆ ಇದು 'ಕಳ್ಳಗಣ್ಣು–ಕಳ್ಳಗಿವಿ'

ಟ್ರ್ಯಾಕಿಂಗ್ ಉದ್ದೇಶಕ್ಕಾಗಿ ಅಭಿವೃದ್ಧಿಗೊಳಿಸಲಾದ ಇದು ವ್ಯಾಪಕವಾಗಿ ದುರ್ಬಳಕೆಯಾಗುತ್ತಿದೆ. ಇದನ್ನು ಉಪಯೋಗಿಸಲು ಐಟಿ ಪರಿಣಿತರಾಗಬೇಕಿಲ್ಲ. ಇನ್ನೊಬ್ಬ ವ್ಯಕ್ತಿ ಮೊಬೈಲ್ ಒಳಗೆ ಇದನ್ನು ಸುಲಭವಾಗಿ ಇನ್‌ಸ್ಟಾಲ್ ಮಾಡಿದರಾಯಿತು. ಅವರ ಜಿಪಿಎಸ್ ಲೋಕೇಷನ್ ತಿಳಿದುಕೊಳ್ಳಬಹುದು, ಖಾಸಗಿ ಸಂದೇಶಗಳನ್ನು ಓದಬಹುದು, ಕ್ಯಾಮೆರಾ ಮೂಲಕ ನೋಡಬಹುದು ಮತ್ತು ಮೈಕ್ರೋಫೋನ್‌ನಿಂದ ಆಲಿಸಬಹುದು. ಮೇಲಾಗಿ ಇದು ಮಾರುಕಟ್ಟೆಯಲ್ಲಿ ಸಿದ್ಧವಾಗಿ ಲಭಿಸುತ್ತದೆ. ಮೊಬೈಲ್‌ಗಳಿಗೆ ಮಾತ್ರವಲ್ಲದೇ ಲ್ಯಾಪ್‌ಟಾಪ್‌ಗಳು ಮತ್ತು ಡೆಸ್ಕ್‌ಟಾಪ್‌ಗಳಿಗೂ ಇದನ್ನು ಇನ್‌ಸ್ಟಾಲ್ ಮಾಡಬಹುದು. ಮತ್ತೊಂದು ಆತಂಕದ ಸಂಗತಿ ಎಂದರೆ ನಿರುಪದ್ರವಿ ಕ್ಯಾಲೆಂಡರ್ ಅಥವಾ ಕ್ಯಾಲ್ಕುಲೇಟರ್‌ನಂತೆ ಕಾಣುವ ಐಕಾನ್‌ಗಳೇ ಅಪಾಯಕಾರಿ ಸ್ಟಾಕರ್‌ವೇರ್ ಆಗಿರಬಹುದು. ಸ್ಟಾಕರ್‌ವೇರ್ ಪ್ರಬಲ ಕಣ್ಗಾವಲು ಕಾರ್ಯಗಳನ್ನು ನಿರ್ವಹಿಸುವುದರಿಂದ ಇತ್ತೀಚಿನ ದಿನಗಳಲ್ಲಿ ಇದರ ಬಳಕೆ ಹೆಚ್ಚಾಗುತ್ತಿದೆ. ಅನ್ಯರ ಸ್ಮಾರ್ಟ್‌ಫೋನ್‌ಗಳಲ್ಲಿ ಕಳ್ಳಗಣ್ಣು–ಕಳ್ಳಗಿವಿ ರೀತಿ ಇದು ಕೆಲಸ ಮಾಡುತ್ತದೆ. ಇದು ಕಿ ಲಾಗ್ಗಿಂಗ್, ಮೇಕಿಂಗ್ ಸ್ಕ್ರೀನ್‌ಶಾಟ್, ಇಂಟರ್‌ನೆಟ್ ಚುಟುವಟಿಕೆಗಳ ಮೇಲೆ ನಿಗಾ, ಲೋಕೇಷನ್ ರೆಕಾರ್ಡಿಂಗ್, ವಿಡಿಯೋ ಆಡಿಯೋ ರೆಕಾರ್ಡಿಂಗ್ ಮಾಡುತ್ತದೆ. ಬೇಹುಗಾರರ ರೀತಿಯಲ್ಲಿ ಕಾರ್ಯನಿರ್ವಹಿಸುವ ಈ ಅಪ್ಲಿಕೇಷನ್ ಇನ್‌ಸ್ಟಾಲ್ ಮಾಡಿದ ಪ್ರೋಗ್ರಾಂಗಳ ಪಟ್ಟಿಯಲ್ಲಿ ಕಾಣಿಸುವುದಿಲ್ಲ. ಸಿಸ್ಟಮ್ ಪ್ರೋಸೆಸಸ್ ಅಥವಾ ಪ್ರೋಗ್ರಾಂಗಳ ಸೋಗಿನಲ್ಲಿ ಇದು ತನ್ನ ಗೂಢಚಾರಿಕೆ ಕೆಲಸ ಮುಂದುವರಿಸುತ್ತದೆ.



ಅಮೆರಿಕ, ರಷ್ಯಾ ಮತ್ತು ಬ್ರೆಜಿಲ್ ಇದರ ಹಾವಳಿಗೆ ಹೆಚ್ಚಾಗಿ ಬಾಧಿತವಾದ ದೇಶಗಳಾಗಿವೆ. ಭಾರತದಲ್ಲಿ ಕಳೆದ ವರ್ಷ ಸ್ಟಾಕ್‌ವೇರ್‌ನೊಂದಿಗೆ ಆಕ್ರಮಣಕ್ಕೆ ಒಳಗಾದ ಮೊಬೈಲ್ ಮತ್ತಿತ್ತರ ಸಾಧನಗಳ ಸಂಖ್ಯೆ ಶೇ.54ರಷ್ಟಿದೆ ಎಂದು ಸಮೀಕ್ಷಾ ವರದಿಯೊಂದು ತಿಳಿಸಿದೆ. ಇನ್ನು ಅದೆಷ್ಟೋ ಪ್ರಕರಣಗಳು ಬೆಳಕಿಗೆಬರುವುದಿಲ್ಲ. ಸ್ಟಾಕ್‌ವೇರ್‌ನ ಹೆಚ್ಚುತ್ತಿರುವ ಜನಪ್ರಿಯತೆಗೆ ಪ್ರತಿಯಾಗಿ ಇದರ ಹಾವಳಿಯನ್ನು ತಡೆಗಟ್ಟಿ ಬಳಕೆದಾರರ ಖಾಸಗಿತನ ರಕ್ಷಿಸಲು ಅನೇಕ ಸೇಫ್‌ಗಾರ್ಡ್ ಆ್ಯಪ್‌ಗಳು ಮಾರುಕಟ್ಟೆಯಲ್ಲಿ ಲಭ್ಯವಿದೆ.

### ಸ್ಟಾಕರ್‌ವೇರ್ ಎಂದರೇನು?

ಸ್ಟಾಕರ್‌ವೇರ್ ಎಂದರೆ ಸಾಧನಗಳಲ್ಲಿ ಸ್ಥಾಪಿಸಬಹುದಾದ ಸಾಫ್ಟ್‌ವೇರ್, ಇದು ಬಳಕೆದಾರರ ಅರಿವಿಲ್ಲದೆ ಮೂರನೇ ವ್ಯಕ್ತಿಗೆ ಆ ಸಾಧನದ ಸ್ಥಳ ಮತ್ತು ಚಟುವಟಿಕೆಯನ್ನು ವಿವೇಚನೆಯಿಂದ ಟ್ರ್ಯಾಕ್ ಮಾಡಲು ಅನುವು ಮಾಡಿಕೊಡುತ್ತದೆ. ಸ್ಥಳಗಳು, ಸಂದೇಶಗಳು ಮತ್ತು ಕರೆ ಇತಿಹಾಸದಿಂದ ಸಾಮಾಜಿಕ ಮಾಧ್ಯಮ ಪ್ರೊಫೈಲ್‌ಗಳು, ಫೋಟೋಗಳು ಮತ್ತು ಬ್ರೌಸರ್ ಇತಿಹಾಸದವರೆಗೆ ಸಾಧನದ ಚಟುವಟಿಕೆಯ ಬಹುತೇಕ ಎಲ್ಲಾ ಅಂಶಗಳನ್ನು ಅವರು ಮೇಲ್ವಿಚಾರಣೆ ಮಾಡಬಹುದು. ಸಾಮಾನ್ಯವಾಗಿ ಸ್ಮಾರ್ಟ್‌ಫೋನ್‌ಗಳಲ್ಲಿ ಸ್ಥಾಪಿಸಲಾದ ಸ್ಟಾಕರ್‌ವೇರ್, "ಸ್ಟಾಕರ್" ಫೋನ್ ಕರೆಗಳನ್ನು ರಹಸ್ಯವಾಗಿ ಪ್ರತಿಬಂಧಿಸಲು, ಕ್ಯಾಮೆರಾ ಅಥವಾ ಮೈಕ್ರೊಫೋನ್ ಅನ್ನು ಪ್ರವೇಶಿಸಲು ಮತ್ತು ಸ್ಕ್ರೀನ್‌ಶಾಟ್‌ಗಳನ್ನು ತೆಗೆದುಕೊಳ್ಳಲು ಸಹ ಸಕ್ರಿಯಗೊಳಿಸುತ್ತದೆ.

ಹೆಚ್ಚಿನ ಜನರಿಗೆ ತಮ್ಮ ಸಾಧನಗಳ ಜಿಯೋಲೋಕಲೈಸೇಶನ್‌ಗಳನ್ನು ಟ್ರ್ಯಾಕ್ ಮಾಡಬಹುದು ಎಂದು ತಿಳಿದಿದೆ, ಉದಾಹರಣೆಗೆ, ಸಾಧನ ಕಾಣೆಯಾದರೆ ಇದು ಸಹಾಯಕವಾಗಿರುತ್ತದೆ. ಆದಾಗ್ಯೂ, ಮೂರನೇ ವ್ಯಕ್ತಿಗಳು ಸಾಧನದ ಚಟುವಟಿಕೆಯನ್ನು ಟ್ರ್ಯಾಕ್ ಮಾಡಬಹುದು ಎಂದು ತಿಳಿದಿರುವುದು ಕಡಿಮೆ ಮಂದಿಗೆ.

### ನಿಮ್ಮ ಫೋನ್ ಟ್ರ್ಯಾಕ್ ಆಗುತ್ತಿರಬಹುದು...ಎಚ್ಚರ..!

ಸ್ಟಾಕರ್‌ವೇರ್ ಹಿನ್ನೆಲೆಯಲ್ಲಿ ಕಾರ್ಯನಿರ್ವಹಿಸುವುದರಿಂದ, ಸಾಫ್ಟ್‌ವೇರ್ ಅನ್ನು ಪತ್ತೆಹಚ್ಚಲು ಯಾವುದೇ ಫೂಲ್‌ಪ್ರೂಫ್ ವಿಧಾನವಿಲ್ಲ. ಆದಾಗ್ಯೂ, ನಿಮ್ಮ ಫೋನ್ ಅನ್ನು ಮೇಲ್ವಿಚಾರಣೆ ಮಾಡಲಾಗುತ್ತಿದೆಯೇ ಎಂದು ಪರಿಶೀಲಿಸಲು ಬಯಸುವವರಿಗೆ ಇಲ್ಲಿ ಕೆಲವು ಟಿಪ್ಸ್‌ಗಳಿವೆ. ಸಾಮಾನ್ಯಕ್ಕಿಂತ ವೇಗವಾಗಿ ಖಾಲಿಯಾಗುವ ಬ್ಯಾಟರಿ ; ಸಾಧನವು ಸ್ವತ: ಆನ್ ಮತ್ತು ಆಫ್ ಆಗುತ್ತದೆ; ಫೋನ್ ಸೆಟ್ಟಿಂಗ್‌ಗಳಲ್ಲಿ ಬದಲಾವಣೆಗಳು; ಅನುಮಾನಾಸ್ಪದ ಅಪ್ಲಿಕೇಶನ್‌ಗಳು, ವಿಶೇಷವಾಗಿ ಸ್ಥಳಗಳು ಅಥವಾ ಇತರ ಚಟುವಟಿಕೆಗಳನ್ನು ಟ್ರ್ಯಾಕ್ ಮಾಡಲು ಅಸಾಮಾನ್ಯ ಅನುಮತಿಗಳನ್ನು ಹೊಂದಿರುತ್ತವೆ ಎಲ್ಲಾ ಅಪ್ಲಿಕೇಶನ್‌ಗಳನ್ನು ಪರಿಶೀಲಿಸಿ ಮತ್ತು ಅಸಾಮಾನ್ಯ, ಅಪರಿಚಿತ ಅಥವಾ ನಿರೀಕ್ಷೆಯಂತೆ ಕಾರ್ಯನಿರ್ವಹಿಸುವುದಿಲ್ಲ ; ಡೇಟಾ ಬಳಕೆಯಲ್ಲಿ ವಿವರಿಸಲಾಗದ ಏರಿಕೆ–ಇವು ಇದರ ಲಕ್ಷಣಗಳು

ನಿಮ್ಮ ಸ್ಮಾರ್ಟ್‌ಫೋನ್‌ನಲ್ಲಿ ಸ್ಟಾಕರ್‌ವೇರ್ ಅನ್ನು ಸ್ಥಾಪಿಸಲಾಗಿದೆ ಎಂದು ನೀವು ಅನುಮಾನಿಸಿದರೆ

ನೀವು ತೆಗೆದುಕೊಳ್ಳಬೇಕಾದ ಕೆಲವು ಕ್ರಮಗಳ ಬಗ್ಗೆ ಮಾಹಿತಿ ಇಲ್ಲಿದೆ–ಮೇಲ್ವಿಚಾರಣೆ ಮಾಡದ ಬೇರೆ ಫೋನ್ ಅಥವಾ ಸಾಧನವನ್ನು ಬಳಸಿ. ಸಾಧ್ಯವಾದರೆ ಅಪಾಯಕ್ಕೆ ಸಿಲುಕಿದ ಸಾಧನವನ್ನು ಬದಲಾಯಿಸಬೇಕು ; ಅನುಮಾನಾಸ್ಪದ ಅಪ್ಲಿಕೇಶನ್‌ಗಳು, ಅಸಾಮಾನ್ಯ ಚಟುವಟಿಕೆ ಅಥವಾ ವಿಚಿತ್ರ ಸೆಟ್ಟಿಂಗ್‌ಗಳು ಸೇರಿದಂತೆ ಸಾಫ್ಟ್‌ವೇರ್ ಇರುವಿಕೆಯನ್ನು ಸೂಚಿಸುವ ಯಾವುದನ್ನಾದರೂ ದಾಖಲಿಸಬೇಕು; ಸೈಬರ್ ಅಪರಾಧದ ದೌರ್ಜನ್ಯದಂತಹ ಸಂದರ್ಭಗಳಲ್ಲಿ, ಸಂತ್ರಸ್ತರಿಗೆ ನೆರವು ನೀಡುವ ಸರ್ಕಾರೇತರ ಸಂಸ್ಥೆಗಳಿಂದ ಸಹಾಯ ಪಡೆಯಿರಿ; ಫೋನ್ "ರೂಟ್ ಆಗಿದೆಯೇ" (ಆಂಡ್ರಾಯ್ಡ್‌ಗಾಗಿ) ಅಥವಾ "ಜೈಲ್ ಬ್ರೋಕನ್" ಆಗಿದೆಯೇ (ಐಓಎಸ್‌ಗಾಗಿ) ಎಂದು ಪರಿಶೀಲಿಸಿ.

ಸಲಹೆ ಅಥವಾ ಸಹಾಯಕ್ಕಾಗಿ ಬೆಂಬಲ ಸಂಸ್ಥೆಯನ್ನು ಸಂಪರ್ಕಿಸಿ. Coalition Against Stalkerware ವೆಬ್‌ಸೈಟ್ ಸ್ಥಳೀಯವಾಗಿ ಒಂದನ್ನು ಹುಡುಕಲು ನಿಮಗೆ ಸಹಾಯ ಮಾಡುತ್ತದೆ. ಆಂಡ್ರಾಯ್ಡ್ ಫೋನ್‌ಗಳು ಮತ್ತು ಇತರ ಸಾಧನಗಳಿಂದ ಸ್ಟಾಕರ್‌ವೇರ್ ಅನ್ನು ಹೇಗೆ ತೆಗೆದುಹಾಕಬೇಕು.

ಸಾಧನವನ್ನು ಸ್ಕ್ಯಾನ್ ಮಾಡಲು ಮತ್ತು ಸಂಭಾವ್ಯವಾಗಿ ಅನಗತ್ಯ ಅಪ್ಲಿಕೇಶನ್ (ಪಿಯುಎ) ಪ್ರೋಗ್ರಾಂಗಳು ಸೇರಿದಂತೆ ಯಾವುದೇ ಬೆದರಿಕೆಗಳನ್ನು ತೆಗೆದುಹಾಕಲು ಮಾಲ್‌ವೇರ್ ಸ್ಕ್ಯಾನರ್ ಬಳಸಿ. ನೀವು ಗುರುತಿಸದ ಅಥವಾ ಸ್ಥಾಪಿಸದ ಯಾವುದೇ ಅಪ್ಲಿಕೇಶನ್‌ಗಳನ್ನು ಅನ್‌ಇನ್‌ಸ್ಟಾಲ್ ಮಾಡಿ, ಯಾವುದೇ ಸ್ಟಾಕರ್‌ವೇರ್ ಸೇರಿದಂತೆ ಸಾಧನವನ್ನು ಅಳಿಸಲು ಫ್ಯಾಕ್ಟರಿ ಮರುಹೊಂದಿಕೆಯನ್ನು ಮಾಡಿ.

ನಿಮ್ಮ ಫೋನ್ ಅನ್ನು ರಕ್ಷಿಸಲು ಬಲವಾದ ಪಾಸ್‌ವರ್ಡ್ ಬಳಸಿ ಮತ್ತು ಅದನ್ನು ಎಂದಿಗೂ ಇತರರೊಂದಿಗೆ ಹಂಚಿಕೊಳ್ಳಬೇಡಿಸಾಧ್ಯವಾದರೆ ಬಯೋಮೆಟ್ರಿಕ್ ದೃಢೀಕರಣವನ್ನು ಸಕ್ರಿಯಗೊಳಿಸಿ. ನಿಮ್ಮ ಫೋನ್‌ನಲ್ಲಿರುವ ಎಲ್ಲಾ ಖಾತೆಗಳಿಗೆ ವಿಭಿನ್ನ ಪಾಸ್‌ವರ್ಡ್‌ಗಳನ್ನು ಬಳಸಿ. ಪಾಸ್‌ವರ್ಡ್ ನಿರ್ವಾಹಕ ಸಹಾಯ ಮಾಡುತ್ತದೆ. ಮತ್ತು ಅವುಗಳನ್ನು ನಿಯಮಿತವಾಗಿ ಬದಲಾಯಿಸಬೇಕು. ವಿಶ್ವಾಸಾರ್ಹ ಮೂಲಗಳಿಂದ ಮಾತ್ರ ಅಧಿಕೃತ ಅಪ್ಲಿಕೇಶನ್‌ಗಳನ್ನು ಡೌನ್‌ಲೋಡ್ ಮಾಡಿ. ಗಮನಿಸದ ಸಾಧನಗಳನ್ನು ಅನ್‌ಲಾಕ್ ಮಾಡದೆ ಬಿಡಬೇಡಿ ಮತ್ತು ಸಾಧನವನ್ನು ಬಳಸಲು ಕೇಳುವ ಜನರ ಬಗ್ಗೆ ಜಾಗರೂಕರಾಗಿರಿ – ಭೌತಿಕ ಪ್ರವೇಶವು ಸ್ಟಾಕರ್‌ವೇರ್ ಅನ್ನು ಸ್ಥಾಪಿಸಲು ಅವಕಾಶವನ್ನು ಒದಗಿಸುತ್ತದೆ.ವಿಶ್ವಾಸಾರ್ಹ ಮೂಲದಿಂದ ಬರದ ಹೊರತು, ಅನಿರೀಕ್ಷಿತವಾಗಿ ಉಡುಗೊರೆಯಾಗಿ ನೀಡಲಾಗುವ ಸಾಧನಗಳ ಬಗ್ಗೆ ಜಾಗರೂಕರಾಗಿರಿ.

ಸಾಧನಗಳಲ್ಲಿ ಭದ್ರತಾ ವೈಶಿಷ್ಟ್ಯಗಳನ್ನು ಸಕ್ರಿಯಗೊಳಿಸಿ. ಉದಾಹರಣೆಗೆ, ಆಂಡ್ರಾಯ್ಡ್ ಸಾಧನಗಳಲ್ಲಿ, ಬಳಕೆದಾರರು "ಅಜ್ಞಾತ ಮೂಲಗಳಿಂದ" ಸ್ಥಾಪನೆಗಳನ್ನು ನಿರ್ಬಂಧಿಸಬಹುದು. ಸಾಧನಗಳಲ್ಲಿನ ಎಲ್ಲಾ ಆಪರೇಟಿಂಗ್ ಸಿಸ್ಟಂಗಳು ಮತ್ತು ಅಪ್ಲಿಕೇಶನ್‌ಗಳು ನವೀಕೃತವಾಗಿವೆಯೆ ಎಂದು ಖಚಿತಪಡಿಸಿಕೊಳ್ಳಿ. (ಆಂಡ್ರಾಯ್ಡ್‌ಗಾಗಿ) ರೂಟಿಂಗ್ ಅಥವಾ (ಐಫೋನ್‌ಗಳಿಗಾಗಿ) ಜೈಲ್‌ಬ್ರೇಕಿಂಗ್ ಅನ್ನು ತಪ್ಪಿಸಿ – ಇದು ಆಪರೇಟಿಂಗ್ ಸಿಸ್ಟಮ್‌ಗಳ ಮೇಲಿನ ಮಿತಿಗಳನ್ನು ತೆಗೆದುಹಾಕಬಹುದಾದರೂ, ಈ ಕ್ರಿಯೆಗಳು ಸಾಧನಗಳ ಅಂತರ್ಗತ ಭದ್ರತಾ ವೈಶಿಷ್ಟ್ಯಗಳನ್ನು ರಾಜಿ ಮಾಡಬಹುದು.

ತಮ್ಮ ಫೋನ್‌ಗಳು ಸ್ಟಾಕರ್‌ವೇರ್‌ನಿಂದ ಅಪಾಯಕ್ಕೆ ಸಿಲುಕಿವೆ ಎಂದು ಅನುಮಾನಿಸುವ ಬಳಕೆದಾರರು ಮೊದಲು ತಮ್ಮ ಸುರಕ್ಷತೆಯನ್ನು ಪರಿಗಣಿಸಬೇಕು. ಏಕೆಂದರೆ ಅದನ್ನು ತೆಗೆದುಹಾಕಲು ಪ್ರಯತ್ನಿಸಿದರೆ ಪ್ರೋಗ್ರಾಂ ಸ್ಟಾಕರ್‌ಗೆ ಎಚ್ಚರಿಕೆ ನೀಡಬಹುದು. ಆದ್ದರಿಂದ ಸಾಧ್ಯವಾದರೆ ರಾಜಿಯಾಗದ ಸಾಧನವನ್ನು ಬಳಸಿ, ಸ್ಟಾಕರ್‌ವೇರ್ ಇರುವಿಕೆಯನ್ನು ಸೂಚಿಸುವ ಯಾವುದೇ ಚಟುವಟಿಕೆಯನ್ನು ದಾಖಲಿಸಿ ಮತ್ತು ಅಗತ್ಯವಿದ್ದರೆ, ಸೈಬರ್ ತಜ್ಞರು ಅಥವಾ ಪೊಲೀಸರನ್ನು ಸಂಪರ್ಕಿಸಿ. ಹಾಗೆ ಮಾಡುವುದು.

# ಭಾರತ–ಪಾಕಿಸ್ತಾನ ಯುದ್ಧ ಮತ್ತು ಭಯೋತ್ಪಾದಕರ ರಕ್ತ ದಾಹ



ಬ್ರಿಟಿಷ್ ಆಳ್ವಿಕೆಯು ಭಾರತದ ವಿಭಜನೆಯು ನಂತರ, ಎರಡು ಪ್ರತ್ಯೇಕ ರಾಷ್ಟ್ರಗಳು ರೂಪುಗೊಂಡವು, ಭಾರತ (ಹಿಂದೂಗಳ ಪ್ರಾಬಲ್ಯ) ಮತ್ತು ಪಾಕಿಸ್ತಾನ (ಮುಸ್ಲಿಮರ ಪ್ರಾಬಲ್ಯ). ಸ್ವಾತಂತ್ರ್ಯದ ನಂತರ ರಾಜತಾಂತ್ರಿಕ ಸಂಬಂಧಗಳು ಸ್ಥಾಪನೆಯಾದರೂ, ವಿಭಜನೆ ನಂತರ ತಕ್ಷಣದ ಹಿಂಸಾತ್ಮಕ ಘಟನೆಗಳು, ಯುದ್ಧಗಳು, ಭಯೋತ್ಪಾದಕ ದಾಳಿಗಳು ಮತ್ತು ಹಲವಾರು ಪ್ರಾದೇಶಿಕ ವಿವಾದಗಳು ಇನ್ನಷ್ಟು ಜಟಿಲಗೊಳಿಸಿ ಸಂಬಂಧವನ್ನು ಹದಗೆಡಿಸಿದೆ.

1947ರಲ್ಲಿ ಸ್ವಾತಂತ್ರ್ಯ ಪಡೆದಾಗಿನಿಂದ, ಎರಡೂ ದೇಶಗಳು ಮೂರು ಪ್ರಮುಖ ಯುದ್ಧಗಳನ್ನು, ಒಂದು ಅಘೋಷಿತ ಯುದ್ಧವನ್ನು ಮಾಡಿವೆ ಮತ್ತು ಸಶಸ್ತ್ರ ಕದನಗಳು ಮತ್ತು ಗಡಿಗಳಲ್ಲಿ ಮಿಲಿಟರಿ ನಿಲುಗಡೆಗಳಲ್ಲಿ ಭಾಗಿಯಾಗಿವೆ.1971 ರ ಭಾರತ–ಪಾಕಿಸ್ತಾನ ಯುದ್ಧವನ್ನು ಹೊರತುಪಡಿಸಿ, ಕಾಶ್ಮೀರದ ವಿವಾದವು ಈ ಎಲ್ಲಾ ಸಂಘರ್ಷಗಳ ಪ್ರಮುಖ ಕೇಂದ್ರಬಿಂದುವಾಗಿದೆ, ಇದರ ಪರಿಣಾಮವಾಗಿ ಪೂರ್ವ ಪಾಕಿಸ್ತಾನ (ಈಗ ಬಾಂಗ್ಲಾದೇಶ) ಪ್ರತ್ಯೇಕವಾಯಿತು. 1971ರ ಯುದ್ಧದಲ್ಲಿ ಪೂರ್ವ–ಪಶ್ಚಿಮ ಎರಡೂ ಗಡಿಯೊಳಗೆ ಭಾರತದ ಸೈನ್ಯವು ಸಂಪೂರ್ಣವಾಗಿ ಮುನ್ನುಗ್ಗಿ ಡಾಕ, ಕರಾಚಿ ಮತ್ತು ಲಾಹೋರ್ ನಗರಗಳವರೆಗೆ ಕಾದಾಟವಾಗಿ ವಶಪಡಿಸಿಕೊಳ್ಳುವ ಹಂತಕ್ಕೆ ಬಂದು 93 ಸಾವಿರ ಪಾಕಿಸ್ತಾನಿ ಸೈನಿಕರು ಶರಣಾಗತಿ ಕೋರಿ ಭಾರತದ ಮುಂದೆ ಮಂಡಿಯೂರಿದ್ದರು. ಆದರೆ 1972ರ ನಂತರ ದ್ವಿಪಕ್ಷೀಯ ಸಂಬಂಧಗಳನ್ನು ಸುಧಾರಿಸಲು ಹಲವಾರು ಪ್ರಯತ್ನಗಳನ್ನು ಮಾಡಲಾಯಿತು, ಇದು ಸ್ವಲ್ಪ ಮಟ್ಟಿಗೆ ಉದ್ವಿಗ್ನತೆಯನ್ನು ಕಡಿಮೆ ಮಾಡುವಲ್ಲಿ ಯಶಸ್ವಿಯಾಯಿತು. ಆದಾಗ್ಯೂ, ಆಗಾಗ್ಗೆ ಭಯೋತ್ಪಾದಕ ದಾಳಿಗಳು ಮತ್ತು ಕದನ ವಿರಾಮ ಉಲ್ಲಂಘನೆಗಳಿಂದಾಗಿ ಈ ಪ್ರಯತ್ನಗಳಿಗೆ ಅಡ್ಡಿಯಾಯಿತು.

ನ್ಯಾಯಯುತವಾಗಿ ಭಾರತಕ್ಕೆ ಸೇರಬೇಕಾದ ಕಾಶ್ಮೀರವನ್ನು ತನ್ನದಾಗಿಸಿಕೊಳ್ಳಲು ದೇಶಕ್ಕೆ ಸ್ವಾತಂತ್ರ್ಯ ಬಂದಾಗಿನಿಂದಲೂ ಪಾಕಿಸ್ತಾನ ಅನೇಕ ತಂತ್ರ–ಕುತಂತ್ರಗಳನ್ನು ನಡೆಸುತ್ತಾ ಅಡ್ಡ ಹಾಕುತ್ತಾ ಭಯೋತ್ಪಾದನೆ ಮೂಲಕ ಕಾಶ್ಮೀರ ಮತ್ತು ಭಾರತದ ಆಂತರಿಕ ಭದ್ರತೆಯನ್ನು ಅಭದ್ರಗೊಳಿಸುತ್ತಾ ಬಂದಿದೆಯಾದರೂ ಅದಕ್ಕೆ ದಿಟ್ಟ ಪ್ರತ್ಯುತ್ತರಗಳ ಮೂಲಕ ಭಾರತ ಕಾಲಕಾಲಕ್ಕೆ ಉತ್ತರ ನೀಡುತ್ತಲೇ ಬಂದಿದೆ.

1947 ರಲ್ಲಿ ಬ್ರಿಟಿಷ್ ಸಾಮ್ರಾಜ್ಯದಿಂದ ಸ್ವಾತಂತ್ರ್ಯ ಪಡೆದಾಗಿನಿಂದ, ಭಾರತ ಮತ್ತು ಪಾಕಿಸ್ತಾನಗಳು ನಾಲ್ಕು ಪೂರ್ಣ ಪ್ರಮಾಣದ ಯುದ್ಧಗಳು, ಹಲವಾರು ಮಿಲಿಟರಿ ಬಿಕ್ಕಟ್ಟುಗಳು ಮತ್ತು ನಡೆಯುತ್ತಿರುವ ಗಡಿಯಾಚೆಗಿನ ಸಂಘರ್ಷಗಳಿಂದ ಗುರುತಿಸಲ್ಪಟ್ಟ ದೀರ್ಘ ಮತ್ತು ಪ್ರಕ್ಷುಬ್ಧ ಸಂಬಂಧವನ್ನು ಸಹಿಸಿಕೊಂಡಿವೆ . ಈ ಉದ್ವಿಗ್ನತೆಗಳ ತಿರುಳು ಕಾಶ್ಮೀರ ವಿವಾದವಾಗಿದೆ, ಆದಾಗ್ಯೂ ಭಯೋತ್ಪಾದನೆ, ಗಡಿ ಒಳನುಸುಳುವಿಕೆ ಮತ್ತು ರಾಜಕೀಯ ಅಸ್ಥಿರತೆಯಂತಹ ಇತರ ಸಮಸ್ಯೆಗಳು ಸಹ ಹಗೆತನವನ್ನು ಹೆಚ್ಚಿಸಿವೆ.

ಶ್ರೀ ನರೇಂದ್ರ ಮೋದಿಯವರು 2014ರಲ್ಲಿ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡ ದಿನದಿಂದಲೇ ದೇಶ ರಕ್ಷಣೆಗೆ ಹಿಂದೆಂದಿಗಿಂತ ಗರಿಷ್ಠ ಅದ್ಯತೆ ನೀಡಿ ಹಲವಾರು ರಕ್ಷಣಾ ಕ್ರಮಗಳನ್ನು ಕೈಗೊಂಡರು. ಸೇನಾಪಡೆಗಳ (ಭೂಸೇನೆ, ವಾಯುಪಡೆ ಮತ್ತು ನೌಕಾದಳ) ಬಲವರ್ಧನೆ ಮತ್ತು ಅತ್ಯಾಧುನಿಕ ಶಸ್ತ್ರಾಸ್ತ್ರಗಳಿಗೆ ಪ್ರತಿ ಬಜೆಟ್‌ನಲ್ಲೂ ಕೋಟಿಗಟ್ಟಲೇ ವಿಶೇಷ ಅನುದಾನ ನೀಡುತ್ತಲೇ ಬಂದಿದ್ದಾರೆ. 35,000 ಕೋಟಿ ರೂ.ಗಳ ವೆಚ್ಚದಲ್ಲಿ ಎಸ್400 ಟ್ರಯ್ಯಂಪ್ ಸ್ಕ್ವಾರ್ಡನ್‌ಗಳು ಸೇರಿದಂತೆ ಅತ್ಯಂತ ಬಲಿಷ್ಟ ಶಸ್ತ್ರಾಸ್ತ್ರ ಮತ್ತು ರಕ್ಷಣಾ ಸಾಧನಗಳು ಭಾರತೀಯ ಸೇನಾಪಡೆಗಳ ಬತ್ತಳಿಕೆಗೆ ಸೇರಿವೆ. ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ), ಸಂಶೋಧನೆ ಮತ್ತು ವಿಶ್ಲೇಷಣೆ ಘಟಕ (ರಾ), ಎಚ್‌ಎಎಲ್ ಸೇರಿದಂತೆ ರಕ್ಷಣಾ ಉಪಕರಣಗಳು ಮತ್ತು ಅತ್ಯಾಧುನಿಕ ಯುದ್ಧ ವಿಮಾನಗಳ ನಿರ್ಮಾಣಕ್ಕೆ ಹೆಚ್ಚಿನ ಅದ್ಯತೆ ನೀಡಿದ್ದಾರೆ. ಕಳೆದ 11 ವರ್ಷಗಳಲ್ಲಿ ಭಾರತೀಯ ಸೇನೆ ವಿಶ್ವದಲ್ಲೇ ಅತ್ಯಂತ ಶ್ರೇಷ್ಠ ಪಡೆಗಳಲ್ಲೊಂದು ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.



ಸಂವೇದಕಗಳು ಮತ್ತು ರಾಡಾರ್‌ಳನ್ನು ಸಂಯೋಜಿಸುವ ಆಕಾಶತೀರ್ ವ್ಯವಸ್ಥೆಯು ನೈಜ ಸಮಯದಲ್ಲಿ ಮೇಲ್ವಿಚಾರಣೆ ಮತ್ತು ಶತ್ರು ಸೇನೆಯ ಆಕ್ರಮಣವನ್ನು ತಟಸ್ಥಗೊಳಿಸಲು ಅವಕಾಶ ಮಾಡಿಕೊಟ್ಟಿತು, ಭಾರತದ ಅನೇಕ ಪದರಗಳಲ್ಲಿ ರಕ್ಷಣಾ ತಂತ್ರಜ್ಞಾನವನ್ನು ಪ್ರದರ್ಶಿಸಿತು, ರಾಷ್ಟ್ರವನ್ನು ರಕ್ಷಿಸಲು ನಿಖರವಾಗಿ ಕಾರ್ಯಗತಗೊಳಿಸಿತು. ಆಪರೇಷನ್ ಸಿಂಧೂರ್ ಭಾರತದ ದೃಢ ನಿರ್ಧಾರ, ಅದರ ತಾಂತ್ರಿಕ ಕೌಶಲ್ಯ ಮತ್ತು ಪಾಕಿಸ್ತಾನದ ಭಯೋತ್ಪಾದಕ ಬೆದರಿಕೆಗಳಿಂದ ತನ್ನ ನಾಗರಿಕರನ್ನು ರಕ್ಷಿಸುವ ದೃಢ ಬದ್ಧತೆಗೆ ಉದಾಹರಣೆಯಾಗಿದೆ. ಇದು ಪ್ರಧಾನಿ ಮೋದಿ ಅವರ ದೇಶ ರಕ್ಷಣಾ ಕೌಶಲ್ಯಕ್ಕೆ ಸಾಕ್ಷಿಯಾಗಿದೆ.

'ವಹಾ ಸೇ ಗೋಲಿ ಚಲೇಗಿ ಯಹಾ ಸೇ ಗೋಲಾ ಚಲೇಗಾ'(ಅತ್ತ ಕಡೆಯಿಂದ ಗೋಲಿ ಹಾರಿಸಿದರೆ ಇತ್ತ ಕಡೆಯಿಂದ ಫಿರಂಗಿ ಗುಂಡು ಹಾರುತ್ತದೆ') ಎಂದು ಮೋದಿ ಘರ್ಜಿಸಿದ್ದಾರೆ.



'ಅವರು (ಪಾಕಿಸ್ತಾನ) ಬಂದೂಕಿನಿಂದ ಗುಂಡು ಹಾರಿಸಿದರೆ ನೀವು ಫಿರಂಗಿಯಿಂದ ಉತ್ತರ ನೀಡಿ' ಎಂದು ಮೋದಿ ಸೇನಾ ಪಡೆಗಳಿಗೆ ಸ್ಪಷ್ಟ ಸೂಚನೆ ನೀಡಿರುವುದು ವೈರಿಗಳ ಎದೆ ಝಲ್ಲೆನ್ನುವಂತಾಗಿದೆ. ಮುಂದಿನ ಯಾವುದೇ ಉಗ್ರರ ಕೃತ್ಯವನ್ನು ಯುದ್ಧವೆಂದು ಪರಿಗಣಿಸುವುದಾಗಿ ಕೇಂದ್ರ ಸರ್ಕಾರ ಸ್ಪಷ್ಟ ಮಾತುಗಳಲ್ಲಿ ಹೇಳಿರುವುದು ಉಗ್ರರ ಜಂಘಾ ಬಲವೇ ಅಡಗಿ ಹೋಗುವಂತಾಗಿದೆ.

ಐರನ್ ಡೋಮ್‌ನಂಥ ಭಾರತದ ವಾಯು ರಕ್ಷಣಾ ವ್ಯವಸ್ಥೆಯನ್ನು ಬಲಪಡಿ ಸುವಲ್ಲಿ ಪ್ರಧಾನಿ ಮೋದಿಯವರ ನಾಯಕತ್ವದ ಬಗ್ಗೆ ಅಮೆರಿಕ, ಇಸ್ರೇಲ್ ಮತ್ತಿತರ ದೇಶಗಳು ನಿಬ್ಬೆರಗಾಗಿವೆ. ಪಾಕಿಸ್ತಾನ ಹೊಂದಿರುವ ಚೀನಾದ ಪ್ರಬಲ ಶಸ್ತ್ರಾಸ್ತ್ರಗಳೇ ಭಾರತದ ಬ್ರಹ್ಮಾಸ್ತ್ರಗಳ ಮುಂದೆ ಟುಸ್ಸಾಗಿವೆ. ಭಾರತೀಯ ವಾಯುಪಡೆಯು ಪಾಕಿಸ್ತಾನ ಆಕ್ರಮಿಸಿಕೊಂಡಿ ರುವ ಕಾಶ್ಮೀರ ಮತ್ತು ಕಾಶ್ಮೀರದ ಒಂಬತ್ತು ಭಯೋತ್ಪಾದಕ ಶಿಬಿರಗಳನ್ನು ಕ್ರೂಸ್ ಕ್ಷಿಪಣಿ ಗಳಾದ ಎಸ್ಸಿಎಎಲ್ಪಿ, ನಿಖರ ಬಾಂಬ್‌ಗಳಾದ ಹ್ಯಾಮರ್, ರಫೇಲ್ ವಿಮಾನ ಮತ್ತು ಮೆರೋಡಿಯೊ ಯುದ್ಧಸಾಮಗ್ರಿಗಳಾದ ಸ್ಕೈಸ್ಟ್ರೈಕರ್ ಬಳಸಿ ಯಶಸ್ವಿಯಾಗಿ ನಾಶ ಪಡಿಸಿದೆ.

ಪಾಕಿಸ್ತಾನವು ಪಂಜಾಬ್, ಗುಜರಾತ್, ರಾಜಸ್ಥಾನ ಮತ್ತು ಜಮ್ಮು ಮತ್ತು ಕಾಶ್ಮೀರಕ್ಕೆ ಕ್ಷಿಪಣಿಗಳು ಮತ್ತು ಡ್ರೋನ್‌ಳೊಂದಿಗೆ ಪ್ರತಿದಾಳಿ ನಡೆಸಿದಾಗ, ಎಸ್–400 ಸುದರ್ಶನ್ ಚಕ್ರ, ಆಕಾಶ್ ಕ್ಷಿಪಣಿ ವ್ಯವಸ್ಥೆ, ಎಂಆರ್‌ಎಸ್‌ಎಎಂ ಮತ್ತು ಐಎಎಫ್‌ನ ಫಿರಂಗಿ ಜು–23 ಅವುಗಳನ್ನು ನುಚ್ಚುನೂರು ಮಾಡಿವೆ. ಭಾರತೀಯ ಭೂಮಿಗೆ ವೈರಿ ಪಡೆಗಳಿಂದ ಕಿಂಚಿತ್ತೂ ಹಾನಿಯಾಗದಂತೆ ತಡೆಯುವಲ್ಲಿ ಪ್ರಧಾನಿ ಮೋದಿ ಮುಂದಾಳತ್ವದಲ್ಲಿ ಮತ್ತು ನಮ್ಮ ಸೇನೆಯ ಸಮರ್ಥವಾಗಿ ದೂರದೃಷ್ಟಿ ಮತ್ತು ನೈಪುಣ್ಯತೆಯಿಂದ ಕೆಲಸ ಮಾಡಿದೆ.

ಭಯೋತ್ಪಾದನೆ ಮತ್ತು ಗಡಿತಂಟೆ ವಿಷಯದಲ್ಲಿ ಮೊದಲಿನಿಂದಲೂ ಕಪಟ ನಾಟಕ ಆಡುತ್ತಿರುವ ಪಾಕಿಸ್ತಾನದ ಬಣ್ಣ ಮತ್ತೊಮ್ಮೆ ಬಟಾಬಯಲಾಗಿದೆ. ಪಹಲ್ಗಾಂ ನರಮೇಧಕ್ಕೆ ಪ್ರತೀಕಾರವಾಗಿ ಭಾರತದ ಸೇನೆಪಡೆಗಳು ನಡೆಸಿದ ಸತತ ದಾಳಿಗಳಿಂದ ಹೆದರಿ ಕಂಗಾಲಾಗಿ ಕಂಗೆಟ್ಟು ಕದನ ವಿರಾಮಕ್ಕೆ ಮಂಡಿಯೂರಿ ಅಂಗಲಾಚಿದ್ದ ಪಾಕ್ ತನ್ನ ವಕ್ರಬುದ್ದಿಯನ್ನು ಪ್ರದರ್ಶಿಸಿದೆ. ಯುದ್ದ ವಿರಾಮ ಘೋಷಣೆ ಬಳಿಕವೂ ಭಾರತದ ನಾಲ್ಕು ರಾಜ್ಯಗಳ ಮೇಲೆ ನೂರಾರು ಡ್ರೋಣ್‌ಗಳ ದಾಳಿ ನಡೆಸಿದೆ. ಪಾಕಿಸ್ತಾನದ ಅಪ್ರಚೋದಿತ ಆಕ್ರಮಣಕ್ಕೆ ಭಾರತ ಸೂಕ್ತ ತಿರುಗೇಟು ನೀಡಿದೆ. ಈ ಹಿಂದೆ ಪಾಕಿಸ್ತಾನ ಲೆಕ್ಕವಿಲ್ಲದಷ್ಟು ಬಾರಿ ಯುದ್ಧ ವಿರಾಮಗಳು ಮತ್ತು ಗಡಿ ಸಂಯಮ ನೀತಿಯನ್ನು ಉಲ್ಲಂಘಿಸಿದೆ. ಈಗ ಮತ್ತೆ ಕದನ ವಿರಾಮದ ಕಪಟ ನಾಟಕವಾಡುತ್ತಿರುವ ಆ ದೇಶವನ್ನು ನಂಬುವುದಾದರೂ ಹೇಗೆ? ಈ ಹಿಂದೆ ನಡೆದ ಭಾರತ–ಪಾಕಿಸ್ತಾನ ನಡುವಣ ಯುದ್ಧಗಳು ಮತ್ತು ಸಂಘರ್ಷಕ್ಕೆ ಪಾಕಿಸ್ತಾನ ಕಾರಣ ಎಂಬುದು ಜಗಜ್ಜಾಹೀರವಾಗಿದೆ. ಈ ಹಿಂದೆಯೂ ಎರಡೂ ದೇಶಗಳ ನಡುವೆ ಕದನ ವಿರಾಮಗಳು ಘೋಷಣೆಯಾಗಿದ್ದವು. ಇತಿಹಾಸದ ಪುಟಗಳನ್ನು ಅವಲೋಕಿಸಿದಾಗ ಸಂಘರ್ಷದ ಹಾದಿಯಲ್ಲಿ ಭಯೋತ್ಪಾದಕರ ಹಿನ್ನೆಲೆಗಳು ಮುಗ್ಧ ನಾಗರೀಕರ ಪ್ರಾಣಹಾನಿ ಮಾಡಿದ್ದು ಮನವರಿಕೆಯಾಗಿರುತ್ತದೆ.

ಇದರಿಂದ ಭಾರತ ಸರ್ಕಾರವು ವಿಚಲಿತ ಗೊಳ್ಳದೆ 75 ವರ್ಷಗಳಲ್ಲಿ ಕ್ಷಿಪಣಿ ತಂತ್ರಜ್ಞಾನ ವನ್ನು ದೇಶೀಯವಾಗಿ ಅಭಿವೃದ್ಧಿಪಡಿಸಿ ದೇಶದ ಸ್ವಾವಲಂಬನೆ ಮತ್ತು ಸಂರಕ್ಷಣೆ ಮಾಡುವಲ್ಲಿ ಯಶಸ್ವಿಯಾಗಿ ಸಾಧನೆ ಮಾಡಿರುತ್ತದೆ. ಇತ್ತೀಚಿನ ಭಾರತ ಪಾಕಿಸ್ತಾನ್ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ ಸುಧಾರಿತ ಮತ್ತು ಆಧುನಿಕ ತಂತ್ರಜ್ಞಾನದ ಆಕಾಶಕ್ಕೆ ಚಿಮ್ಮುವ ಕ್ಷಿಪಣಿಗಳನ್ನು ತಯಾರಿಸಿ ನಮ್ಮ ಸೈನ್ಯವು ಅಳವಡಿಸಿಕೊಂಡ ಪ್ರಯುಕ್ತ ಇಂತಹ ವ್ಯವಸ್ಥೆಯಿಂದ 20 ಕಿ.ಮೀ. ಎತ್ತರದ ಮತ್ತು ಆಳದ ಗುರಿಗಳನ್ನು ನಿಖರವಾಗಿ ಬೇಧಿಸಿ ಉಡಾಯಿಸುವ ಮೂಲಕ ಶತ್ರುಗಳ ಹುಟ್ಟಡಗಿಸಿದೆ ಮತ್ತು ಶತ್ರುಗಳ ನೆಲೆಗಳಲ್ಲಿ ವ್ಯಾಪಕ ಹಾನಿಗೊಳಿಸಿರುತ್ತದೆ. ಈ ತಂತ್ರಜ್ಞಾನ ಯಶಸ್ವಿ ದಾಳಿಗಳ ಫಲಶ್ರುತಿಯಾಗಿ ಇಂದು ಭಾರತವು ವಿಶ್ವದ ಅತ್ಯಂತ ಬಲಿಷ್ಠ ದೇಶಗಳಲ್ಲಿ ಒಂದಾಗಿ ಪ್ರಜ್ವಲಿಸುತ್ತಿದೆ. ಮತ್ತು ದೇಶದ ಜನರು ನೆಮ್ಮದಿಯಿಂದ ಬದುಕುವಂತಾಗಿದೆ.

# ಭಾರತ–ಪಾಕಿಸ್ತಾನ ಯುದ್ಧ ಮತ್ತು ಭಯೋತ್ಪಾದಕರ ರಕ್ತ ದಾಹ



**ಸಿಯಾಚಿನ್ ಸಂಘರ್ಷ (1984–2003):** ಪಾಕಿಸ್ತಾನದ ನಿಯಂತ್ರಣವನ್ನು ತಡೆಗಟ್ಟಲು ಭಾರತವು ಆಪರೇಷನ್ ಮೇಘದೂತ್ ಅನ್ನು ಪ್ರಾರಂಭಿಸಿದಾಗ, ವಿಶ್ವದ ಅತಿ ಎತ್ತರದ ಯುದ್ಧ ಭೂಮಿಯಾದ ಸಿಯಾಚಿನ್ ಹಿಮನದಿಯ ಮೇಲೆ ದೀರ್ಘಕಾಲದ ಮಿಲಿಟರಿ ಕಾರ್ಯಾಚರಣೆ ಪ್ರಾರಂಭವಾಯಿತು. ಇದು ಸುಮಾರು ಎರಡು ದಶಕಗಳ ಕಾಲ ನಡೆಯಿತು.

**2001–2002 ಭಾರತ–ಪಾಕಿಸ್ತಾನ ಸೇನಾ ಬಿಕ್ಕಟ್ಟು:** ಡಿಸೆಂಬರ್ 2001 ರಲ್ಲಿ ಭಾರತೀಯ ಸಂಸತ್ತಿನ ಮೇಲೆ ದಾಳಿಯ ನಂತರ, ಭಾರತವು ಆಪರೇಷನ್ ಪರಾಕ್ರಮ್‌ನಲ್ಲಿ ಗಡಿಯಲ್ಲಿ ತನ್ನ ಸೈನ್ಯವನ್ನು ಸಜ್ಜುಗೊಳಿಸಿತು ಉದ್ವಿಗ್ನತೆ ಹೆಚ್ಚಾಯಿತು, ಆದರೆ ರಾಜತಾಂತ್ರಿಕತೆಯು ಪೂರ್ಣ ಪ್ರಮಾಣದ ಯುದ್ಧವನ್ನು ತಪ್ಪಿಸಿತು.

**2008ರ ಮುಂಬೈ ದಾಳಿಗಳು:** ಪಾಕಿಸ್ತಾನ ಮೂಲದ ಭಯೋತ್ಪಾದಕ ಗುಂಪು ಲಷ್ಕರ್ –ಎ–ತೈಬಾ ಮುಂಬೈನಲ್ಲಿ ಪ್ರಮುಖ ಭಯೋತ್ಪಾದಕ ದಾಳಿ ನಡೆಸಿ 170ಕ್ಕೂ ಹೆಚ್ಚು ಜನರನ್ನು ಬಲಿ ತೆಗೆದುಕೊಂಡಿತು. ಭಾರತವು ಪಾಕಿಸ್ತಾನವನ್ನು ಹೊಣೆಗಾರರನ್ನಾಗಿ ಮಾಡಿತು, ಇದು ಅಂತರರಾಷ್ಟ್ರೀಯ ಆಕ್ರೋಶಕ್ಕೆ ಕಾರಣವಾಯಿತು ಮತ್ತು ಸಂಬಂಧಗಳನ್ನು ಮತ್ತಷ್ಟು ಹದಗೆಡಿಸಿತು.

**1947ರ ಮೊದಲ ಇಂಡೋ–ಪಾಕ್ ಯುದ್ಧ):** ಸ್ವಾತಂತ್ರ್ಯ ನಂತರ ಮೊದಲ ಬಾರಿಗೆ ಭಾರತ ಪಾಕಿಸ್ತಾನದೊಂದಿಗೆ ಯುದ್ಧ ನಡೆಸಿತ್ತು. ಇದನ್ನು 'ಮೊದಲ ಕಾಶ್ಮೀರ ಯುದ್ಧ' ಎಂದೂ ಕರೆಯಲಾಗುತ್ತದೆ. ಅಕ್ಟೋಬರ್ 1947ರಲ್ಲಿ ಪಾಕಿಸ್ತಾನ ಬೆಂಬಲಿತ ಬುಡಕಟ್ಟು ಸೇನಾಪಡೆಗಳು ಜಮ್ಮು ಮತ್ತು ಕಾಶ್ಮೀರದ ಮೇಲೆ ಆಕ್ರಮಣ ಮಾಡಿದ್ದವು. ಇದಕ್ಕೆ ಪ್ರತಿಕ್ರಿಯೆಯಾಗಿ, ಮಹಾರಾಜ ಹರಿ ಸಿಂಗ್ ಜಮ್ಮು ಮತ್ತು ಕಾಶ್ಮೀರವನ್ನು ಭಾರತೀಯ ಒಕ್ಕೂಟಕ್ಕೆ ಸೇರಿಸಿದ್ದರು. ಭಾರತವು ಆ ಪ್ರದೇಶವನ್ನು ರಕ್ಷಿಸಲು ತನ್ನ ಸೈನ್ಯವನ್ನು ಕಳುಹಿಸಿತು, ಇದು ಎರಡು ರಾಷ್ಟ್ರಗಳ ನಡುವೆ ಪೂರ್ಣ ಪ್ರಮಾಣದ ಸಂಘರ್ಷಕ್ಕೆ ಕಾರಣವಾಯಿತು.

1949ರವರೆಗೂ ಇದು ಮುಂದುವರಿದಿತ್ತು. ಬಳಿಕ ವಿಶ್ವಸಂಸ್ಥೆ ಯುದ್ಧವಿರಾಮ ಘೋಷಿಸಿತು. ಇದರ ಪರಿಣಾಮ ನಿಯಂತ್ರಣ ರೇಖೆಯ ಉದ್ದಕ್ಕೂ (ಎಲ್‌ಒಸಿ) ಭಾರತ ಮತ್ತು ಪಾಕಿಸ್ತಾನದ ನಡುವೆ ಕಾಶ್ಮೀರ ವಿಭಜನೆಯಾಯಿತು. ಆಗಿನಿಂದ ಪಾಕಿಸ್ತಾನವು ಭಾರತದ ವಿರುದ್ಧ ಕತ್ತಿ ಮಸೆಯುತ್ತಲೇ ಇದೆ.

**1965 (ಎರಡನೇ ಇಂಡೋ–ಪಾಕ್ ಯುದ್ಧ):** 1695ರ ಆ.5 ರಂದು ಕಾಶ್ಮೀರದಲ್ಲಿ ಸಶಸ್ತ್ರ ಪಡೆಗಳ ನಡುವೆ ಸಂಘರ್ಷ ಏರ್ಪಟ್ಟಿತ್ತು. ಸಾವಿರಾರು ಪಾಕಿಸ್ತಾನಿ ಸೈನಿಕರು ಸ್ಥಳೀಯ ದಂಗೆಕೋರರ ವೇಷ ಧರಿಸಿ ಜಮ್ಮು ಮತ್ತು ಕಾಶ್ಮೀರದ ನಿಯಂತ್ರಣ ರೇಖೆಯ ಮೂಲಕ ಭಾರತೀಯ ಪ್ರದೇಶಕ್ಕೆ ನುಸುಳಿದ್ದರು. 'ಆಪರೇಷನ್ ಜಿಬ್ರಾಲ್ಟರ್' ಎನ್ನುವ ರಹಸ್ಯ ಕಾರ್ಯಾಚರಣೆ ನಡೆಸಿ ಸ್ಥಳೀಯವಾಗಿ ನಡೆಯುತ್ತಿದ್ದ ದಂಗೆಗಳನ್ನು ಪ್ರಚೋದಿಸುತ್ತಿದ್ದರು. ಇದಕ್ಕೆ ಭಾರತ ಮಿಲಿಟರಿ ದಾಳಿಯ ಮೂಲಕ ಪ್ರತಿಕ್ರಿಯಿಸಿತ್ತು. ಪರಿಣಾಮ ಅಂತರರಾಷ್ಟ್ರೀಯ ಗಡಿಯಲ್ಲಿ ಯುದ್ಧ ಉಲ್ಬಣಗೊಂಡಿತ್ತು. 1965ರ ಸೆ.23ರವರೆಗೆ ಇದು ಮುಂದುವರಿದಿತ್ತು. ಬಳಿಕ ಸೋವಿಯತ್ ಒಕ್ಕೂಟ, ಮತ್ತು ವಿಶ್ವಸಂಸ್ಥೆಯ ಮಧ್ಯಸ್ಥಿಕೆಯಲ್ಲಿ ಉಭಯ ರಾಷ್ಟ್ರಗಳು ಕದನ ವಿರಾಮಕ್ಕೆ ಒಪ್ಪಿಕೊಂಡಿದ್ದವು.

**1971ರ ಬಾಂಗ್ಲಾದೇಶ ವಿಮೋಚನಾ ಯುದ್ಧ:** 1971ರಲ್ಲಿ ಭಾರತ –ಪಾಕಿಸ್ತಾನ ಯುದ್ಧ ಪೂರ್ವ ಪಾಕಿಸ್ತಾನ(ಈಗಿನ ಬಾಂಗ್ಲಾದೇಶ)ದಲ್ಲಿ ಸ್ವಾತಂತ್ರ್ಯಕ್ಕೆ ಪ್ರಚೋದಿಸಿತ್ತು. ಬಾಂಗ್ಲಾದೇಶಕ್ಕೆ ಬೆಂಬಲಿಸುವ ಸಲುವಾಗಿ ಭಾರತಕ್ಕೆ ಯುದ್ಧಕ್ಕೆ ಪ್ರವೇಶಿಸಿತು. ಪೂರ್ವ ಮತ್ತು ಪಶ್ಚಿಮ, ಎರಡೂ ಕಡೆಗಳ ತೀವ್ರ ಹೋರಾಟದ ಬಳಿಕ ಪಾಕಿಸ್ತಾನ ಪಡೆ ಶರಣಾಗಿತ್ತು. ಪರಿಣಾಮ ಬಾಂಗ್ಲಾದೇಶ ರೂಪುಗೊಂಡು ಪ್ರತ್ಯೇಕ ಸ್ವತಂತ್ರ ರಾಷ್ಟ್ರವಾಯಿತು.

**1999ರ ಕಾರ್ಗಿಲ್ ಕದನ:** ಜಮ್ಮು ಕಾಶ್ಮೀರದ ಕಾರ್ಗಿಲ್ ಪ್ರದೇಶವನ್ನು ಪಾಕಿಸ್ತಾನ ಸೇನೆ ಮತ್ತು ಉಗ್ರರು ಆಕ್ರಮಿಸಿಕೊಂಡಾಗ 1999ರಲ್ಲಿ ಮೇ ಮತ್ತು ಜುಲೈ ತಿಂಗಳ ನಡುವೆ ಭಾರತ ಮತ್ತು ಪಾಕಿಸ್ತಾನ ನಡುವೆ ಕಾರ್ಗಿಲ್ ಯುದ್ಧ ನಡೆಯಿತು. ಇದಕ್ಕೆ ಭಾರತ 'ಆಪರೇಷನ್ ವಿಜಯ್' ಎಂದು ಹೆಸರಿಟ್ಟಿತ್ತು, ವಾಯುಪಡೆಯ 'ಆಪರೇಷನ್ ಸಫೇದ್ ಸಾಗರ್' ಬೆಂಬಲದೊಂದಿಗೆ 1999ರ ಜುಲೈ 26 ರಂದು ಭಾರತವು ನಿಯಂತ್ರಣವನ್ನು ಮರಳಿ ಪಡೆದುಕೊಂಡಿತು. ಯುದ್ಧವೂ ಕೊನೆಗೊಂಡಿತು, ಆ ದಿನವನ್ನು ಈಗ 'ಕಾರ್ಗಿಲ್ ವಿಜಯ್ ದಿವಸ್' ಎಂದು ಆಚರಿಸಲಾಗುತ್ತದೆ.

**2016ರ ಉರಿ ದಾಳಿಗೆ ಪ್ರತೀಕಾರ:** ಜಮ್ಮು ಮತ್ತು ಕಾಶ್ಮೀರದ ಉರಿ ಪ್ರದೇಶದಲ್ಲಿನ ಭಾರತೀಯ ಸೇನಾ ಶಿಬಿರದ ಮೇಲೆ 2016ರ ಸೆ.18ರಂದು ಉಗ್ರರು ದಾಳಿ ನಡೆಸಿ 19 ಮಂದಿ ಯೋಧರನ್ನು ಬಲಿಪಡೆದಿದ್ದರು. ಇದಕ್ಕೆ ಪ್ರತೀಕಾರವಾಗಿ ಭಾರತೀಯ ಸೇನೆ ಸೆ. 28–29ರಂದು ಗಡಿ ನಿಯಂತ್ರಣ ರೇಖೆಯುದ್ದಕ್ಕೂ ಸರ್ಜಿಕಲ್ ಸ್ಟ್ರೈಕ್ ನಡೆಸಿತ್ತು. ಪರಿಣಾಮ ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಭಯೋತ್ಪಾದಕರ ನೆಲೆಗಳು ಧ್ವಂಸಗೊಂಡು ಉಗ್ರರು ಮೃತಪಟ್ಟಿದ್ದರು. ಉಗ್ರಗಾಮಿಗಳಿಗೆ ಅಪಾರ ನಷ್ಟವಾಗಿತ್ತು.

**2019ರ ಪುಲ್ವಾಮಾ ದಾಳಿಗೆ ದಿಟ್ಟ ಉತ್ತರ:** 2019ರ ಫೆ. 14ರಂದು ಕಾಶ್ಮೀರದ ಪುಲ್ವಾಮಾದಲ್ಲಿ ಉಗ್ರರು ದಾಳಿ ನಡೆಸಿದಾಗ 40 ಸಿಆರ್‌ಪಿಎಫ್ ಸಿಬ್ಬಂದಿ ಮೃತರಾಗಿದ್ದರು. ಇದಕ್ಕೆ ಪ್ರತಿಯಾಗಿ ಫೆ. 26ರಂದು ಭಾರತೀಯ ವಾಯುಸೇನೆ ಪಾಕಿಸ್ತಾನದ ಬಾಲಾಕೋಟ್‌ನಲ್ಲಿರುವ ಜೈಶ್–ಎ–ಮೊಹಮ್ಮದ್ ಉಗ್ರ ಸಂಘಟನೆಯ ಶಿಬಿರದ ಮೇಲೆ ಏರ್‌ಸ್ಟ್ರೈಕ್ ನಡೆಸಿ ಪ್ರತೀಕಾರ ತೀರಿಸಿಕೊಂಡಿತ್ತು. ಪಾಕಿಸ್ತಾನದ ಯುದ್ಧ ವಿಮಾನಗಳು ಧ್ವಂಸಗೊಂಡು ಪಾಕ್ ಸೈನಿಕರು ಹತರಾದರು. 1971ರ ಬಳಿಕ ನಡೆದ ಏರ್‌ಸ್ಟ್ರೈಕ್ ಇದಾಗಿತ್ತು.

ಉಭಯ ದೇಶಗಳ ಸೇನೆಗಳ ಮುಖಾಮುಖಿ 1947ರಿಂದ ನಡೆಯುತ್ತಲೇ ಇದೆ. ದೇಶ ವಿಭಜನೆಯ ಬಳಿಕ ಅನೇಕ ದಾಳಿ–ಪ್ರತಿದಾಳಿಗಳು ನಡೆದಿವೆ. ಪಾಕಿಸ್ತಾನದ ದಾಳಿಗೆ ಭಾರತ ಪ್ರತ್ಯುತ್ತರ ನೀಡುತ್ತಾ ಬಂದಿದೆ. ಮೊದಲ ಕಾಶ್ಮೀರ ಯುದ್ಧ, ಕಾರ್ಗಿಲ್ ಯುದ್ಧ ಮತ್ತು ಇತ್ತೀಚಿನ ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಉತ್ತರ ಸೇರಿದಂತೆ 1947 ರಿಂದ 2024 ರವರೆಗಿನ ಭಾರತ–ಪಾಕಿಸ್ತಾನ ಯುದ್ಧಗಳು ಮತ್ತು ಸಂಘರ್ಷಗಳಲ್ಲಿ ಹಿಂದೂಸ್ತಾನವು ಮೇಲುಗೈ ಸಾಧಿಸುತ್ತಲೇ ಬಂದಿದೆ. ಇಷ್ಟಾದರೂ ಬುದ್ಧಿ ಕಲಿಯದ ಪಾಕಿಸ್ತಾನಕ್ಕೆ ಈ ಬಾರಿಯೂ ಭಾರತೀಯ ದಿಟ್ಟ ಸೇನೆ ಭರ್ಜರಿ ತಿರುಗೇಟು ನೀಡಿದೆ.

ಇಪ್ಪತ್ತು ವರ್ಷಗಳಿಂದ ಹಲವಾರು ಭಯೋತ್ಪಾದಕರ ದಾಳಿಗಳು ಭಾರತ ಭೂಭಾಗದಲ್ಲಿ ನಡೆಯುತ್ತಲೇ ಬಂದಿದೆ. ಪಾಕಿಸ್ತಾನದೊಂದಿಗೆ ರಾಜತಾಂತ್ರಿಕ ಸಂಬಂಧಗಳು ಕಡಿತಗೊಳಿಸದೇ ಇದ್ದರು ಮತ್ತು ವ್ಯಾಪಾರ ವಾಣಿಜ್ಯ ವ್ಯವಹಾರಗಳು ಮತ್ತು ಸಿಂಧೂ ನದಿ ಜಲ ವಿವಾದಗಳು ಇತ್ಯರ್ಥಕ್ಕೆ ಅಡ್ಡಿಪಡಿಸದೇ ಮುಂದುವರೆಸಲಾಗಿತ್ತು. ಆದರೆ ಪಾಕಿಸ್ತಾನವು ಈ ಎಲ್ಲಾ ಅನುಕೂಲಗಳ ಮಧ್ಯೆಯು ಭಯೋತ್ಪಾದಕರನ್ನು ಸಾಕಿ ಸಲಹುವ ಏರ್ಪಾಟುಗಳನ್ನು ಮಾಡಿ ಭಾರತ ಜನಾಂಗಕ್ಕೆ ಈ ಕೆಳಕಂಡ ಹಲವಾರು ದಾಳಿಗಳ ಮೂಲಕ ಭಯೋತ್ಪಾದಕರಿಂದ ಹಾನಿ ಉಂಟು ಮಾಡಿರುತ್ತದೆ.

* ಆಗಸ್ಟ್ 15, 2004– ಅಸ್ಸಾಂನ ಧಿಮ್ಜಿ ಶಾಲೆಯಲ್ಲಿ ಬಾಂಬ್ ಸ್ಫೋಟ, 18 ಸಾವು ಮತ್ತು 40 ಜನರಿಗೆ ಗಾಯ.

* ಜುಲೈ 5, 2005– ಅಯೋಧ್ಯೆಯಲ್ಲಿ ರಾಮಜನ್ಮಭೂಮಿಯ ಮೇಲೆ ಭಯೋತ್ಪಾದಕ ದಾಳಿ, 6 ಮರಣ, ಡಜನ್‌ಗಟ್ಟಲೆ ಮಂದಿಗೆ ಗಾಯ.

* ಜುಲೈ 28, 2005– ಜೌನ್‌ಪುರದಲ್ಲಿ ಶ್ರಮಜೀವಿ ಎಕ್ಸ್‌ಪ್ರೆಸ್ ರೈಲಿನಲ್ಲಿ ಆರ್‌ಡಿಎಕ್ಸ್ ಬಾಂಬ್ ಸ್ಫೋಟ, 13 ಸಾವು, 50 ಜನರಿಗೆ ಗಾಯ.

* ಅಕ್ಟೋಬರ್ 29, 2005– ದೀಪಾವಳಿ ಹಬ್ಬಕ್ಕೆ ಎರಡು ದಿನಗಳ ಮೊದಲು, ದೆಹಲಿಯ ಗೋವಿಂದಪುರಿ ಬಸ್, ಪಹರ್‌ಗಂಜ್ ಮತ್ತು ಸರೋಜಿನಿ ನಗರದ ಜನದಟ್ಟಣೆಯ ಪ್ರದೇಶದಲ್ಲಿ ಸರಣಿ ಸ್ಫೋಟಗಳು ಸಂಭವಿಸಿ, 70 ಜನರು ಛಿದ್ರಗೊಂಡರು ಮತ್ತು 250ಕ್ಕೂ ಹೆಚ್ಚು ಜನರು ಗಾಯಗೊಂಡರು, ತಾರಿಕ್ ಅಹ್ಮದ್ ದಾರ್ ಮತ್ತು ರಫೀಕ್ ಅವರೇ ಈ ಭೀಕರ ಕೃತ್ಯದ ಮಾಸ್ಟರ್ ಮೈಂಡ್. ಡಿಸೆಂಬರ್ 28, 2005– ಬೆಂಗಳೂರು ವಿಜ್ಞಾನ ಸಂಸ್ಥೆಯ ಮೇಲೆ ಭಯೋತ್ಪಾದಕ ದಾಳಿ, 1 ಸಾವು, 4 ಜನರಿಗೆ ಗಾಯ.

* 7 ಮಾರ್ಚ್ 2006– ಹಿಂದೂಗಳ ಶ್ರದ್ಧಾಕೇಂದ್ರವಾದ ವಾರಣಾಸಿಯ ಪ್ರಸಿದ್ಧ ಸಂಕಟ ಮೋಚನ ದೇವಾಲಯ ಮತ್ತು ಜನದಟ್ಟಣೆಯ ಕ್ಯಾಂಟ್ ರೈಲು ನಿಲ್ದಾಣದಲ್ಲಿ 3 ಬಾಂಬ್ ಸ್ಫೋಟಗಳಲ್ಲಿ 28 ಭಕ್ತರು ಮತ್ತು ನಾಗರಿಕರು ಸಾವನ್ನಪ್ಪಿದರು, 101 ಜನರು ಗಾಯಗೊಂಡರು, ಲಷ್ಕರ್ ಕುಹಾಬ್ ಮತ್ತು ಸಿಮಿಯ ಕೈವಾಡವಿತ್ತು.

* 11 ಜುಲೈ 2006– ಏಕಕಾಲದಲ್ಲಿ ಮುಂಬೈನಲ್ಲಿ ಮಾತುಂಗಾ ರಸ್ತೆ, ಮಾಹಿಮ್, ಬಾಂದ್ರಾ, ಖಾರ್ ರಸ್ತೆ, ಜೋಗೇಶ್ವರಿ, ಭೈಂದರ್, ಬೋರಿವಲಿ ನಿಲ್ದಾಣಗಳ ಸ್ಥಳೀಯ ರೈಲಿನಲ್ಲಿ ಸರಣಿ ಸ್ಫೋಟ, 209 ಬಲಿ, 700ಕ್ಕೂ ಹೆಚ್ಚು ಮಂದಿ ಗಾಯಗೊಂಡರು, ಫೈಸಲ್ ಶೇಖ್, ಆಸಿಫ್ ಅನ್ಸಾರಿ, ಆಸಿಫ್ ಖಾನ್. ಕಮಲ್ ಅನ್ಸಾರಿ, ಎಹ್ತಾಸಮ್ ಸಿದ್ದಿಕಿ ಮತ್ತು ನವೇದ್ ಖಾನ್ ಈ ಭೀಕರ ದಾಳಿಯ ಅಪಕೃತ್ಯಗಾರರು.

* 8 ಸೆಪ್ಟೆಂಬರ್ 2006– ಮಾಲೆಗಾಂವ್ ಮಸೀದಿಯಲ್ಲಿ ಸರಣಿ ಸ್ಫೋಟ, 37 ಮಂದಿ ಮರಣ, 125 ಮಂದಿಗೆ ಗಾಯ, ನಿಷೇಧಿತ ಭಯೋತ್ಪಾದಕ ಸಂಘಟನೆ ಸ್ಟೂಡೆಂಟ್ ಇಸ್ಲಾಮಿಕ್ ಮೂವ್ಮೆಂಟ್ ಆಫ್ ಇಂಡಿಯಾದ ಕೈವಾಡ.

* 18 ಫೆಬ್ರವರಿ 2007– ಸಂಜೋತಾ ಎಕ್ಸ್‌ಪ್ರೆಸ್ ಸ್ಫೋಟ, 68 ಮಂದಿ ಬಲಿ, 50 ಜನರಿಗೆ ಗಾಯ, ಭಯೋತ್ಪಾದಕ ಸಂಘಟನೆ ಲಷ್ಕರ್–ಎ–ತೈಬಾ ಕೈವಾಡ. ಹೈದರಾಬಾದ್‌ನ ಮೆಕ್ಕಾ ಮಸೀದಿಯಲ್ಲಿ ಸ್ಫೋಟ, 16 ಸಾವು, 100 ಜನರಿಗೆ ಗಾಯ, ಹರ್ಕತ್ ಉಲ್ ಜಿಹಾದ್ ಅಲ್–ಇಸ್ಲಾಮಿ ಕೈವಾಡ.

* ಅಕ್ಟೋಬರ್ 14, 2007– ಲುಧಿಯಾನ ರಂಗಮಂದಿರದಲ್ಲಿ ಸ್ಫೋಟ, 6 ಜನರು ಮೃತ.

* ನವೆಂಬರ್ 24, 2007– ಉತ್ತರ ಪ್ರದೇಶದ ಲಕ್ನೋ, ಅಯೋಧ್ಯೆ ಮತ್ತು ಬನಾರಸ್ ನ್ಯಾಯಾಲಯಗಳಲ್ಲಿ ಸರಣಿ ಬಾಂಬ್ ಸ್ಫೋಟ, 16 ಮಂದಿ ಮರಣ. 79 ಮಂದಿಗೆ ಗಾಯ.

* ಜನವರಿ 1, 2008– ಉತ್ತರ ಪ್ರದೇಶದ ರಾಂಪುರದಲ್ಲಿ ಸಿಆರ್‌ಪಿಎಫ್ ಶಿಬಿರದ ಮೇಲೆ ದಾಳಿ, 8 ಸಾವು, 7 ಜನರಿಗೆ ಗಾಯ, ಲಷ್ಕರ್–ಎ–ತೈಬಾ ಕೈವಾಡ.

* ಮೇ 13, 2008– ಛೋಟಿ ಚೌಪರ್, ಬಡಿ ಚೌಪರ್, ಮನಕ್‌ಪುರ ಪೊಲೀಸ್ ಠಾಣೆ ಪ್ರದೇಶ, ಜೋಹರಿ ಬಜಾರ್, ಟ್ರಿಪೋಲಿಯಾ ಬಜಾರ್, ಜೈಪುರದ ಕೊಟ್ವಾಲಿ ಪ್ರದೇಶದ 9 ಸ್ಥಳಗಳಲ್ಲಿ ಆರ್‌ಡಿಎಕ್ಸ್‌ನಿಂದ ಸರಣಿ ಸ್ಫೋಟ, 63 ಬಲಿ, 200 ಜನರಿಗೆ ಗಾಯ, ಹರ್ಕತ್–ಉಲ್–ಜಿಹಾದ್–ಉಲ್–ಇಸ್ಲಾಮಿ ಈ ಭೀಕರ ದಾಳಿಗೆ ಹೊಣೆ.

* ಜುಲೈ 25, 2008– ಬೆಂಗಳೂರಿನಲ್ಲಿ 8 ಸರಣಿ ಸ್ಫೋಟಗಳು, ಇಬ್ಬರ ಸಾವು, 20 ಜನರಿಗೆ ಗಾಯ.

* ಜುಲೈ 26, 2008– ಗುಜರಾತ್‌ನ ಅಹಮದಾಬಾದ್‌ನಲ್ಲಿ 17 ಸ್ಥಳಗಳಲ್ಲಿ ಸರಣಿ ಬಾಂಬ್ ಸ್ಫೋಟಗಳು, 35 ಸಾವು ಮತ್ತು 110 ಜನರಿಗೆ ಗಾಯ. ಪಾಕ್ ಮೂಲಕ ಭಯೋತ್ಪಾದಕ ಮುಫ್ತಿ ಅಬು ಬಶೀರ್ ಇದರ ಹಿಂದಿನ ಮಾಸ್ಟರ್ ಮೈಂಡ್.

* 13 ಸೆಪ್ಟೆಂಬರ್ 2008– ದೆಹಲಿಯ ಸೆಂಟ್ರಲ್ ಪಾರ್ಕ್‌ನ ಜಿಕೆ 1, ಬರ್ಹಖಾಂಬ ರಸ್ತೆಯ ಗಫರ್ ಮಾರುಕಟ್ಟೆಯಲ್ಲಿ 31 ನಿಮಿಷಗಳಲ್ಲಿ 5 ಬಾಂಬ್‌ಗಳು ಸ್ಫೋಟಗೊಂಡವು, ಇತರ 4 ಬಾಂಬ್‌ಗಳನ್ನು ನಿಷ್ಕ್ರಿಯಗೊಳಿಸಲಾಯಿತು, 33 ಜನರು ಸಾವನ್ನಪ್ಪಿದರು ಮತ್ತು 150 ಕ್ಕೂ ಹೆಚ್ಚು ಜನರು ಗಾಯಗೊಂಡರು ಸ್ಟೂಡೆಂಟ್ ಇಸ್ಲಾಮಿಕ್ ಮೂವ್‌ಮೆಂಟ್ ಆಫ್ ಇಂಡಿಯಾ ಇಂಡಿಯನ್ ಮುಜಾಹಿದ್ದೀನ್ ಈ ಸ್ಫೋಟಗಳನ್ನು ನಡೆಸಿತು.

* 27 ಸೆಪ್ಟೆಂಬರ್ 2008– ದೆಹಲಿ ಮೆಹ್ರೌಲಿಯ ಎಲೆಕ್ಟ್ರಾನಿಕ್ ಮಾರುಕಟ್ಟೆಯಲ್ಲಿ 2 ಬಾಂಬ್ ಸ್ಫೋಟಗಳು, 3 ಸಾವು ಮತ್ತು 33 ಜನರು ಗಾಯಗೊಂಡರು.

* 1 ಅಕ್ಟೋಬರ್ 2008– ಅಗರ್ತಲಾದಲ್ಲಿ ಬಾಂಬ್ ಸ್ಫೋಟ, ನಾಲ್ವರ ಬಲಿ 100 ಜನರಿಗೆ ಗಾಯ.

# ಮಾಹಿತಿ ಹಕ್ಕು : ಭ್ರಷ್ಟಾಚಾರ ನಿರ್ಮೂಲನೆ ಅಸ್ತ್ರ




**ಭಾ**ರತ ಸರ್ಕಾರವು ಮಾಹಿತಿ ಹಕ್ಕು ಕಾಯ್ದೆಯನ್ನು (ಆರ್‌ಟಿಐ) ಜಾರಿಗೊಳಿಸಿ 12ನೇ ಅಕ್ಟೋಬರ್ 2005ರಿಂದ ಅನುಷ್ಠಾನಕ್ಕೆ ಬಂದಿದೆ. ಸಾರ್ವಜನಿಕ ಜೀವನದಲ್ಲಿ ಹೆಚ್ಚು ಪಾರದರ್ಶಕತೆ ಹಾಗೂ ಭ್ರಷ್ಟಾಚಾರ ನಿರ್ಮೂಲನೆಗಾಗಿ ಈ ಕಾಯ್ದೆಯು ಸರ್ಕಾರದಿಂದ ಬಹುತೇಕ ಯಾವುದೇ ಮಾಹಿತಿ ಪಡೆಯುವ ಹಕ್ಕನ್ನು ನಾಗರಿಕರಿಗೆ ಒದಗಿಸುತ್ತದೆ. ಈ ಕಾಯ್ದೆಯ ಹಿಂದೆ ಎರಡು ಉದ್ದೇಶಗಳಿವೆ : ಎಲ್ಲಾ ಭಾರತೀಯರಿಗೆ ಸೂಕ್ತವಾಗಿ ಸರ್ಕಾರದ ಮಾಹಿತಿ ಸಾಮಾನ್ಯ ಜನರಿಗೆ ಲಭಿಸುವಂತೆ ಮಾಡುವುದು ಹಾಗೂ ಆಡಳಿತದಲ್ಲಿ ಹೆಚ್ಚು ಪಾರದರ್ಶಕತೆ ತರುವುದು ಮತ್ತು ಪ್ರತಿ ಸಾರ್ವಜನಿಕ ಅಧಿಕಾರಿ ಜನರಿಗೆ ಉತ್ತರದಾಯಿತ್ವ ಮತ್ತು ವಿಶ್ವಾಸಾರ್ಹತೆ ಹೊಂದುವಂತೆ ಮಾಡುವುದು.

ಭಾರತೀಯ ಸಂವಿಧಾನದ ಅನ್ವಯ, ಮಾಹಿತಿ ಹಕ್ಕು ನಾಗರಿಕರ ಮೂಲಭೂತ ಹಕ್ಕಾಗಿರುತ್ತದೆ. ದೇಶದ ಪ್ರತಿಯೊಬ್ಬ ನಾಗರಿಕ ಒಂದಲ್ಲ ಇನ್ನೊಂದು ರೀತಿಯಲ್ಲಿ ತೆರಿಗೆಗಳನ್ನು ಪಾವತಿಸುತ್ತಿದ್ದು, ಈ ಹಣವನ್ನು ಸರ್ಕಾರ ಹೇಗೆ ವೆಚ್ಚ ಮಾಡುತ್ತಿದೆ ಎಂಬುದನ್ನು ತಿಳಿಯುವ ಹಕ್ಕು ಪ್ರತಿ ಭಾರತೀಯ ಪ್ರಜೆಯು ಹೊಂದಿರುತ್ತಾನೆ. ಈ ಕಾಯ್ದೆಯು ಸರ್ಕಾರದ ನೀತಿಗಳು, ಪ್ರಕ್ರಿಯೆಗಳು ಮತ್ತು ನೀತಿಗಳ ಫಲಶೃತಿಗಳನ್ನು ತಿಳಿದುಕೊಳ್ಳಲು ನಾಗರಿಕನಿಗೆ ಸಂವಿಧಾನದತ್ತ ಸರ್ವ ಹಕ್ಕು ಸಹ ನೀಡುತ್ತದೆ.

ಸ್ವಾತಂತ್ರ್ಯ ಬಂದು ಅರವತ್ತು ವರ್ಷಗಳಾದರೂ ಸಹ ಸರ್ಕಾರದ ಅಧಿಕಾರಿಗಳು ತಾವಾಗಿಯೇ ಜನರಿಗೆ ಮಾಹಿತಿ ನೀಡದ ಕಾರಣ ಈ ಕಾಯ್ದೆಯ ಅಗತ್ಯತೆ ಕಂಡುಬಂದಿತು. ಭ್ರಷ್ಟಾಚಾರ ಮತ್ತು ಆಡಳಿತದಲ್ಲಿ ಪಾರದರ್ಶಕತೆ ಇಲ್ಲದಿರುವಿಕೆ ಹಾಗೂ ಸರ್ಕಾರದಿಂದ ಸಾಮಾನ್ಯ ಜನರ ಅನಾದರ ಮತ್ತು ಉದಾಸೀನತೆ ಪರಿಣಾಮವಾಗಿ ಮತ್ತು ನ್ಯಾಯಾಲಯಗಳ ತೀರ್ಪಿನ ಆಧಾರದಿಂದ ಇದು ಜಾರಿಗೆ ಬಂದಿತು. ತೆರಿಗೆ ಪಾವತಿದಾರನಾದ ಸಾಮಾನ್ಯನಿಗೆ ಸರ್ಕಾರದ ಹೊಣೆಗಾರಿಕೆಯ ಮತ್ತು ಸರ್ಕಾರವು ಒದಗಿಸುವ ಸೌಲಭ್ಯಗಳ ಬಗ್ಗೆ ಮಾಹಿತಿ ಪಡೆಯುವ ಅಗತ್ಯವನ್ನು ಕಲ್ಪಿಸಿತು. ಮಾಹಿತಿ ಕೋರುವ ಪ್ರಕ್ರಿಯೆಯನ್ನು ಮಾಹಿತಿ ಹಕ್ಕು ಕಾಯ್ದೆ ಮೂಲಕ ಅರ್ಜಿದಾರರು ಕೋರುವ ಮಾಹಿತಿ ಪಡೆಯಲು ಆಡಳಿತಾತ್ಮಕ ಪ್ರಕ್ರಿಯೆಯ ವಿನ್ಯಾಸವನ್ನು ಈ ಕಾಯ್ದೆ ಒದಗಿಸಿದೆ.

2004-05ರಲ್ಲಿ ಲೋಕಸಭೆ ಮತ್ತು ರಾಜ್ಯಸಭೆಯು ಮಾಹಿತಿ ಹಕ್ಕು ಕಾಯ್ದೆಯನ್ನು 2005ರಲ್ಲಿ ಸರ್ವಾನುಮತದಿಂದ ಅನುಮೋದನೆಯಾಯಿತು. ಈ ಕಾಯ್ದೆ ಅನ್ವಯ ಸಾಮಾನ್ಯ ವ್ಯಕ್ತಿ ಯಾವುದೇ ಸರ್ಕಾರಿ ಕಚೇರಿ ಅಥವಾ ಸಾರ್ವಜನಿಕ ಅಂಗಸಂಸ್ಥೆಯಿಂದ ಯಾವುದೇ ಮಾಹಿತಿ ಕೋರಬಹುದು. ಯಾವುದೇ ಅಧಿಕೃತ ದಾಖಲೆಗಳು, ದಾಖಲೆ ಪತ್ರಗಳು, ಈ ಮೇಲ್‌ಗಳು ಮತ್ತು ಪ್ರತಿಕಾ ಹೇಳಿಕೆಗಳ ಬಗ್ಗೆ ನಾಗರಿಕರು ಮಾಹಿತಿ ಪಡೆಯಬಹುದು. ಇದು ಮುದ್ರಣ ವಿಷಯ ಮತ್ತು ವಿದ್ಯುನ್ಮಾನ ಮಾಹಿತಿಯನ್ನು ಒಳಗೊಂಡಿರುತ್ತದೆ. ಇದರೊಂದಿಗೆ ಅರ್ಜಿದಾರರು ಕೋರುವ ರೀತಿಯಲ್ಲಿ ದೃಢೀಕೃತ ಪತ್ರ ಅಥವಾ ಫೋಟೋ ಪ್ರತಿಯಂತೆ ಅರ್ಜಿದಾರರಿಗೆ ಸಂಬಂಧಪಟ್ಟ ಸರ್ಕಾರಿ ಕಛೇರಿ ಮುಖ್ಯಸ್ಥರು ಮಾಹಿತಿ ಒದಗಿಸಿಸಬೇಕಿರುತ್ತದೆ.

ಸರ್ಕಾರದ ಆದಾಯ ವೆಚ್ಚಗಳು ಸಾರ್ವಜನಿಕ ಖಾಸಗಿ ಸಹಭಾಗಿತ್ವ, ವರ್ಗಾವಣೆ ನೀತಿ ಮತ್ತು ವರ್ಗಾವಣೆ/ಹುದ್ದೆ ನಿಯೋಜನೆ ಆದೇಶಗಳು, ಆರ್‌ಟಿಐ ಮನವಿ/ಅರ್ಜಿಗಳ ಸ್ವೀಕಾರ ಮತ್ತು ವಿಲೇವಾರಿ, ನಾಗರಿಕರ ಸನ್ನದು, ಮತ್ತು ವಿಚಾರ ಯೋಗ್ಯ ಮತ್ತು ವಿಚಾರ ಯೋಗ್ಯವಲ್ಲದ ವಿಷಯಗಳ ಕುರಿತು ಸಾರ್ವಜನಿಕರಿಗೆ ಮಾಹಿತಿ ನೀಡಲು ಸಚಿವಾಲಯಗಳು, ಇಲಾಖೆಗಳು ಮತ್ತು ಇತರೆ ಸಾರ್ವಜನಿಕ ಸಂಸ್ಥೆಗಳಿಗೆ ಸೂಚನೆ ನೀಡಿ ಈ ಬಗ್ಗೆ ಮಾಹಿತಿ ಅಧಿಕಾರಿಗಳನ್ನು ಪ್ರತ್ಯೇಕವಾಗಿ ನೇಮಿಸಲು ಎಲ್ಲಾ ರಾಜ್ಯ ಸರ್ಕಾರಗಳಿಗೆ ಕೇಂದ್ರ ಸರ್ಕಾರ ನಿರ್ದೇಶನ ನೀಡಿದೆ. ಜನರು ಕೇಳುವ ಮಾಹಿತಿಯನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ತಾನಾಗಿಯೇ ಒದಗಿಸಬೇಕಾಗುತ್ತದೆ.

ಈ ಕಾಯ್ದೆಯು ಸರ್ಕಾರದ ಚಟುವಟಿಕೆಗಳು ಮತ್ತು ನೀತಿಗಳ ಬಗ್ಗೆ ಜನರು ಗರಿಷ್ಠ ಮಾಹಿತಿ ಪಡೆಯಲು ಅನುಕೂಲ ಮಾಡಿಕೊಡುತ್ತದೆ. ಜನರೊಂದಿಗೆ ಈಗ ಅಧಿಕೃತ ಮಾಹಿತಿ ಲಭ್ಯವಿರುವುದರಿಂದ ಸಾರ್ವಜನಿಕ ಅಂಗಸಂಸ್ಥೆಗಳು ಹೆಚ್ಚು ಪಾರದರ್ಶಕವಾಗಿರಲು ಮತ್ತು ಭ್ರಷ್ಟಾಚಾರ ತಡೆಗಟ್ಟಲು ಸಹ ಸಹಾಯ ಮಾಡುತ್ತದೆ. ಸರ್ಕಾರ ಏನು ಮಾಡುತ್ತಿದೆ ಎಂಬುದು ಜನರಿಗೆ ತಿಳಿಯದೇ ಇರುವುದರಿಂದ ಸಾರ್ವಜನಿಕ ವಿಷಯಗಳ ಸುತ್ತ ಸಾಮಾನ್ಯವಾಗಿ ಗೌಪ್ಯತೆ ಇರುವುದರಿಂದ ಭ್ರಷ್ಟಾಚಾರ ನಿಯಂತ್ರಿಸಲು ಇದು ಸಹಕಾರಿ. ಬಹುತೇಕ ಯಾವುದೇ ರೀತಿಯ ಮಾಹಿತಿಯನ್ನು ಸಾಮಾನ್ಯ ವ್ಯಕ್ತಿ ಪಡೆಯಲು ಸಾಧ್ಯವಾಗಿರುವುದರಿಂದ ಇದು ಸರ್ಕಾರದ ಕಾರ್ಯವೈಖರಿಗಳನ್ನು ಸರಿಪಡಿಸಲು ಕೆಲಸ ಮಾಡುತ್ತದೆ ಹಾಗೂ ಭ್ರಷ್ಟಾಚಾರವನ್ನು ಕಡಿಮೆ ಮಾಡಿ ಸರ್ಕಾರದ ಅಧಿಕಾರ ದುರುಪಯೋಗವನ್ನು ತಗ್ಗಿಸುತ್ತದೆ.

ಭಾರತದಾದ್ಯಂತ ಗ್ರಾಮಾಂತರ ಪ್ರದೇಶಗಳ್ಲಿ ಸರ್ಕಾರದಿಂದ ಅನುಷ್ಠಾನಗೊಳ್ಳುವ ವಿವಿಧ ಯೋಜನೆಗಳು ಮತ್ತು ಕಾರ್ಯಕ್ರಮಗಳ ಬಗ್ಗೆ ಯಾವುದೇ ಮಾಹಿತಿಯನ್ನು ಗ್ರಾಮೀಣ ಜನರು ಈ ಕಾಯ್ದೆ ಅನುಷ್ಠಾನ ನಂತರ ಪಡೆಯಬಹುದಾಗಿರುತ್ತದೆ. ಸರ್ಕಾರದ ಕಾರ್ಯಕ್ರಮಗಳ ಉದ್ದೇಶ ಮತ್ತು ಗುರಿ, ಲಕ್ಷ್ಯ ಇಡಲಾದ ಫಲಾನುಭವಿಗಳು ಹಾಗೂ ಅವುಗಳ ಪಟ್ಟಿಯನ್ನು ಪಾರದರ್ಶಕವಾಗಿ ಸರ್ಕಾರಗಳಿಂದ ಜನ ಸಾಮಾನ್ಯರಿಗೆ ಮಾಹಿತಿ ಒದಗಿಸುವುದು ಅಗತ್ಯವಾಗಿದ್ದು ವೈಯಕ್ತಿಕವಾಗಿ ಸುಲಭವಾಗಿ ಪಡೆಯಬಹುದಾಗುತ್ತದೆ.

ಈ ಕಾಯ್ದೆ ಅನ್ವಯ, ಪ್ರತಿ ಸರ್ಕಾರಿ ಕಚೇರಿಯು ಈಗ ಸಾರ್ವಜನಿಕ ಮಾಹಿತಿ ಅಧಿಕಾರಿಯೊಬ್ಬರನ್ನು ನೇಮಕ ಮಾಡಿರುತ್ತದೆ. ಯಾವುದೇ ನಾಗರಿಕರು ಸಾರ್ವಜನಿಕ ಮಾಹಿತಿ ಅಧಿಕಾರಿಗೆ ಅರ್ಜಿಯೊಂದನ್ನು ಬರೆದು ಅಗತ್ಯ ಮಾಹಿತಿಯನ್ನು ಪಡೆಯಬಹುದಾಗಿದೆ. ಈ ಅಧಿಕಾರಿಯ ನೇಮಕ ಮತ್ತು ಕರ್ತವ್ಯದ ಸ್ವರೂಪಗಳನ್ನು ವಿವರವಾಗಿ ವ್ಯಾಖ್ಯಾನಿಸಲಾಗಿದ್ದು, ಇದರಿಂದ ಜನರು ಅಧಿಕಾರಿಯ ಕರ್ತವ್ಯಗಳೇನು ಎಂಬುದನ್ನು ತಿಳಿಯಬಹುದಾಗಿದೆ.

ಈ ನಿಯಮದ ಪ್ರಕಾರ, ಅಧಿಕಾರಿಯಿಂದ ಪತ್ರ ಸ್ವೀಕರಿಸಿದ ದಿನಾಂಕದಿಂದ 30 ದಿನಗಳ ಒಳಗೆ ಮಾಹಿತಿ ಒದಗಿಸಬೇಕಿರುತ್ತದೆ. ಮತ್ತು ಆ ಕಛೇರಿಯಲ್ಲಿ ಮಾಹಿತಿ ಲಭ್ಯವಿಲ್ಲದಿದ್ದರೆ ಅಥವ ಸರ್ಕಾರಿ ಕಚೇರಿಗೆ ಸಂಬಂಧಪಡದಿದ್ದರೆ ಮಾಹಿತಿ ಪಡೆಯಲು ದೀರ್ಘ ಕಾಲ ಬೇಕಾಗಬಹುದು.

ಈ ಕಾಯ್ದೆ ಅನ್ವಯ, ಸರ್ಕಾರಿ ಕಛೇರಿ ನೀಡಿದ ಮಾಹಿತಿಯಿಂದ ನಿಮಗೆ ಸಮಾಧಾನವಾಗದಿದ್ದರೆ ಆ ಬಗ್ಗೆ ಮೇಲ್ಮನವಿ ನೀಡಲು ಒಬ್ಬ ಅಧಿಕಾರಿಯನ್ನು ನಿಯೋಜಿಸಲಾಗಿರುತ್ತದೆ. ಈ ಅಧಿಕಾರಿಯು ಸಾರ್ವಜನಿಕ ಮಾಹಿತಿ ಅಧಿಕಾರಿಗಿಂತ ಮೇಲ್ಪಟ್ಟವರಾಗಿರುತ್ತಾರೆ. ಈ ಮೇಲ್ಮನವಿ ಪ್ರಾಧಿಕಾರಿ ಅಥವ ಮೇಲ್ಮನವಿ ಅಧಿಕಾರಿಯು 15 ದಿನಗಳಲ್ಲಿ ಮಾಹಿತಿ ಒದಗಿಸಬೇಕಿರುತ್ತದೆ. ಇಲ್ಲಿಯು ಮಾಹಿತಿ ಒದಗಿಸದಿದ್ದಲ್ಲಿ ಪ್ರಕರಣದಲ್ಲಿ ಆ ರಾಜ್ಯದ ಮಾಹಿತಿ ಆಯುಕ್ತರು ಮತ್ತು ಆಯೋಗಕ್ಕೆ ದೂರು ನೀಡಬೇಕಿರುತ್ತದೆ. ಪ್ರತಿ ರಾಜ್ಯ ಸರ್ಕಾರವು ರಾಜ್ಯ ಮಾಹಿತಿ ಆಯೋಗವನ್ನು ನೇಮಕ ಮಾಡಿದೆ. ಅರ್ಜಿದಾರರು ಆಯೋಗಕ್ಕೆ ಮೇಲ್ಮನವಿ ಸಲ್ಲಿಸಬಹುದು. ಆಯುಕ್ತರು ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿ ಈ ವಿಷಯ ಇತ್ಯರ್ಥವಾಗಿದೆಯೇ ಮಾಹಿತಿ ನೀಡಿದ್ದಾರೆಯೆ ಎಂಬುದನ್ನು ಪರಾಮರ್ಶಿಸುತ್ತಾರೆ. ಕೇಂದ್ರೀಯ ಮಟ್ಟದಲ್ಲಿ ಕೇಂದ್ರೀಯ ಮಾಹಿತಿ ಆಯೋಗ ಇರುತ್ತದೆ.

ಸಾರ್ವಜನಿಕರಿಗೆ ಒದಗಿಸಲು ಸಾಧ್ಯವಾಗದೇ ಇರುವ ಕೆಲವು ಮಾಹಿತಿಗಳನ್ನು ಬಹಿರಂಗಗೊಳಿಸಿದರೆ ದೇಶದ ಭದ್ರತೆ ಮೇಲೆ ಪರಿಣಾಮ ಉಂಟು ಮಾಡಬಹುದಾದ ಮತ್ತು ಸಾರ್ವಜನಿಕರಿಗೆ ಸಂಬಂಧಪಡದ ಮಾಹಿತಿಗಳನ್ನು ಜನರೊಂದಿಗೆ ಹಂಚಿಕೊಳ್ಳಲು ಸಾಧ್ಯವಿಲ್ಲವೆಂದು ಕಾಯ್ದೆಯಲ್ಲಿ ಇದೆ.

ಮಾಹಿತಿಯನ್ನು ಪಡೆಯಲು ಅನುಕೂಲವಾಗುವಂತೆ ಕಾನೂನನ್ನು ರೂಪಿಸಲಾಗಿದೆ ಹೊರತು ಜನರನ್ನು ಶೋಷಣೆ ಮಾಡುವುದಕ್ಕಾಗಲಿ ಅಥವಾ ಯಾರಿಗೋ ತೊಂದರೆ ಉಂಟು ಮಾಡುವುದಕ್ಕಾಗಿ ಅಲ್ಲ. ಹೀಗಾಗಿ, ಅರ್ಜಿದಾರರು ಮತ್ತು ಸಾರ್ವಜನಿಕರಿಗೆ ಪ್ರಯೋಜನವಾಗುವಂಥ ಮಾಹಿತಿಯನ್ನು ಮಾತ್ರ ಕೇಳಬೇಕು. ನಾಗರಿಕರೊಂದಿಗೆ ಸಾರ್ವಜನಿಕ ಮಾಹಿತಿಯನ್ನು ಹಂಚಿಕೊಳ್ಳುವ ಸರ್ಕಾರದ ಜವಾಬ್ದಾರಿ ಜೊತೆಗೆ ನಾಗರಿಕರೂ ಸಹ ತಮ್ಮ ಕರ್ತವ್ಯಗಳು ಮತು ಹೊಣೆಗಾರಿಕೆಗಳನ್ನು ಅರ್ಥ ಮಾಡಿಕೊಳ್ಳಬೇಕು. ಸಾರ್ವಜನಿಕ ಜೀವನದಲ್ಲಿ ಹೆಚ್ಚು ಪಾರದರ್ಶಕತೆ ಹಾಗೂ ಭ್ರಷ್ಟಾಚಾರ ನಿರ್ಮೂಲನೆಗೆ ಈ ಕಾನೂನನ್ನು ಬಳಸಲು ರಾಜ್ಯಾಂಗವು ಮತ್ತು ಸಂವಿಧಾನವು ನಮ್ಮೆಲ್ಲರಿಗೂ ಈ ಕಾಯ್ದೆ ಅವಕಾಶ ಮಾಡಿಕೊಟ್ಟಿದೆ.

ಮಾಹಿತಿ ಹಕ್ಕು ಕಾಯ್ದೆ 2005ರ ಬಂದ ನಂತರ ಸಾಕಷ್ಟು ಬೆಳವಣಿಗೆಗೆ ಹಾಗೂ ಅಭಿವೃದ್ಧಿಯಾಗಿದ್ದು ಡಿಜಿಟಲ್ ಯುಗಕ್ಕೆ ಕಾಲಿಟ್ಟ ನಂತರ ಇನ್ನೂ ಹೆಚ್ಚಿನ ಮಾಹಿತಿ ಪಡೆಯಬಹುದಾಗಿದ್ದು, ಇದು ವಿಸ್ತೃತವಾಗಿ ಈ ಅಂತರ್‌ಜಾಲ ಕಾಲಘಟ್ಟದಲ್ಲಿ ವೈಯಕ್ತಿಕ ಮಾಹಿತಿಗಳು ಹ್ಯಾಕರ್ ಮೂಲಕ ಕಳ್ಳರ ಪಾಲಾಗುತ್ತಿದೆ. ಇದರಿಂದಾಗಿ ಸರ್ಕಾರವು 'ಡಿಜಿಟಲ್ ವೈಯಕ್ತಿಕ ದತ್ತಾಂಶ ಸುರಕ್ಷತಾ ಕಾಯ್ದೆ (ಡಿಜಿಟಲ್ ಪರ್ಸನಲ್ ಡೇಟಾ ಪ್ರೊಟೆಕ್ಷನ್ ಆಕ್ಟ್), 2023' ಮಾಹಿತಿ ಹಕ್ಕು (ಆರ್‌ಟಿಐ) ಕಾಯ್ದೆಯನ್ನು ಕೇಂದ್ರ ಸರ್ಕಾರ ಉಭಯ ಸದನಗಳಲ್ಲಿ ಒಪ್ಪಿಗೆ ಪಡೆದು 2023ರಲ್ಲಿ ಕಾಯ್ದೆಯೊಂದನ್ನು ಜಾರಿ ಮಾಡಿದೆ. ಆದರೆ ಮಾಹಿತಿ ಹಕ್ಕಿಗೆ ಸಂಬಂಧಿಸಿದಂತಹ ಅಂಶವೊಂದಕ್ಕೆ ಧಕ್ಕೆ ಉಂಟು ಮಾಡುವ ಆತಂಕಕಾರಿ ಅಂಶವೊಂದು ಈ ಕಾಯ್ದೆಯಲ್ಲಿ ಕಂಡುಬಂದಿದೆ. ಇದೇ ಕಾರಣಕ್ಕಾಗಿ 'ಡಿಜಿಟಲ್ ವೈಯಕ್ತಿಕ ದತ್ತಾಂಶ ಸುರಕ್ಷತಾ ಕಾಯ್ದೆ 2023' ಬೀರಬಹುದಾದ ನಕಾರಾತ್ಮಕ ಪರಿಣಾಮಗಳ ಬಗ್ಗೆ ಗಂಭೀರ ಸ್ವರೂಪದ ಕಳವಳಗಳು ದೇಶದ ಎಲ್ಲೆಡೆ ವ್ಯಕ್ತವಾಗಿದೆ. ದತ್ತಾಂಶ ಸುರಕ್ಷತಾ ಕಾಯ್ದೆಗೆ ಸಂಬಂಧಿಸಿದ ನಿಯಮಗಳನ್ನು ಅಧಿಸೂಚನೆಯಲ್ಲಿ ಪ್ರಕಟಿಸಲಾಗಿದ್ದು, ಹಲವಾರು ವಿಷಯಗಳ ಬಗ್ಗೆ ನಿಯಂತ್ರಣವನ್ನು ಕಾಯ್ದೆ ರೂಪದಲ್ಲಿ ಬಿಗಿಗೊಳಿಸಲಾಗಿದೆ.

ಹಲವಾರು ಆರ್‌ಟಿಐ ಕಾರ್ಯಕರ್ತರು/ ಪರಿಣಿತರು ಈ ಕಾಯ್ದೆಯ ಸೆಕ್ಷನ್ 44(3), ಮಾಹಿತಿ ಹಕ್ಕು ಕಾನೂನಿನ ಸೆಕ್ಷನ್ 8(1)(ಜೆ)ಯಲ್ಲಿ ಬದಲಾವಣೆ ತರುವ ಸೂಚನೆ ಕಂಡು ಬಂದಿದೆ ಎಂದು, ಯಾವುದೇ 'ವೈಯಕ್ತಿಕ ಮಾಹಿತಿ'ಯನ್ನು ಬಹಿರಂಗಪಡಿಸಬೇಕಿಲ್ಲ ಎಂಬ ಅಂಶವನ್ನು ಅಡಕಗೊಂಡಿದೆ ಎಂಬ ಆತಂಕದಲ್ಲಿ ಪರಿಶೀಲಿಸಿದಾಗ ಯಾವುದೇ ಸಾರ್ವಜನಿಕ ಮಾಹಿತಿಯನ್ನು ಬಹಿರಂಗಪಡಿಸಲಾಗುವುದಿಲ್ಲ ಎಂಬುದು ಇದರರ್ಥ. ಮಾಹಿತಿ ಹಕ್ಕು ಕಾನೂನಿನ ಸೆಕ್ಷನ್ 8(1)(ಜೆ) ಪ್ರಕಾರ, 'ವೈಯಕ್ತಿಕ ಮಾಹಿತಿಗೆ ಸಂಬಂಧಿಸಿದ ವಿವರಗಳು' ಸಾರ್ವಜನಿಕ ಹಿತಾಸಕ್ತಿಗೆ ಸಂಬಂಧಿಸಿದ್ದಲ್ಲ ಮತ್ತು ಖಾಸಗಿತನದಲ್ಲಿ ಅನಗತ್ಯ ಮಧ್ಯಪ್ರವೇಶ ಮಾಡುತ್ತವೆ ಎಂದಾದರೆ, ಸರ್ಕಾರಿ ಸಂಸ್ಥೆಗಳು ಅಂತಹ ಮಾಹಿತಿಯನ್ನು ಬಹಿರಂಗಪಡಿಸದೆ ಇರಬಹುದು. ಆದರೆ, ಅಂತಹ ಮಾಹಿತಿಯನ್ನು ಬಹಿರಂಗಪಡಿಸುವುದರಲ್ಲಿ ಸಾರ್ವಜನಿಕ ಹಿತಾಸಕ್ತಿ ಅಡಗಿದೆ ಎಂದು ಮೇಲ್ಮನವಿ ಪ್ರಾಧಿಕಾರವು ಹೇಳಿದರೆ, ಆ ಮಾಹಿತಿಯನ್ನು ಒದಗಿಸಬೇಕಾಗುತ್ತದೆ. ಸೆಕ್ಷನ್ 8(1)(ಜೆ)ಗೆ ಈಗ ತಿದ್ದುಪಡಿ ತರಲು ಉದ್ದೇಶಿಸಲಾಗಿದ್ದು, ಯಾವುದೇ ವಿನಾಯಿತಿಗಳು ಇಲ್ಲದೆ ಮಾಹಿತಿಯನ್ನು 'ವೈಯಕ್ತಿಕ' ಎಂದು ವರ್ಗೀಕರಿಸಿ, ಆ ಮಾಹಿತಿ ಬಹಿರಂಗಪಡಿಸುವುದನ್ನು ತಡೆಹಿಡಿಯ ಬಹುದು. ಈ ವಿಷಯದಲ್ಲಿ ಸರ್ಕಾರದ ಮಟ್ಟದಲ್ಲಿ ಮತ್ತು ಸಾರ್ವಜನಿಕರಲ್ಲಿ ಚರ್ಚೆ ಮುಂದುವರಿದಿದೆ.

ಭಾರತ ಸರ್ಕಾರವು ಜಾರಿಗೊಳಿಸಿರುವ ಈ 2023ರ ದತ್ತಾಂಶ ಸುರಕ್ಷತಾ ಕಾಯ್ದೆ ಕೂಡ ನಾಗರಿಕರ ಖಾಸಗಿತನವನ್ನು ಸ್ವಲ್ಪ ಮಟ್ಟಿಗೆ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ತರುವುದೆಂಬ ಅಂಶವು ಮಾಧ್ಯಮಗಳಲ್ಲಿ ಚರ್ಚೆಯಾಗುತ್ತಿದೆ. ಈ ಕಾಯ್ದೆಯ ಸೆಕ್ಷನ್ 17(2)(ಎ) ಪ್ರಕಾರ, ಸರ್ಕಾರದ ಏಜೆನ್ಸಿಗಳಿಗೆ ಕಾಯ್ದೆಯಿಂದ ವಿನಾಯಿತಿ ಇರುತ್ತದೆ,

**9ನೇ ಪುಟಕ್ಕೆ ಮುಂದುವರೆದಿದೆ.**

# ಹಾಲಾಹಲವನ್ನೇ ಉಂಡವನು..ಹಾಲು ಮಾರಿ ಕ್ರಿಕೆಟ್ ಕಿಟ್ ಖರೀದಿಸಿದ್ದವನು.. ತನ್ನದೇ ಸ್ವಂತ ಬ್ರ್ಯಾಂಡ್ ಕಟ್ಟಿದ ಕಥೆ..!



ಇತಿಹಾಸ ನಿರ್ಮಿಸುವವರು ಎದ್ದು ಬರುವುದು ಸಾಮಾನ್ಯ ಮಧ್ಯಮ ವರ್ಗದ ಕುಟುಂಬಗಳಿಂದಲೇ.. ದೇಶಕ್ಕೆ ಮೊದಲ ವಿಶ್ವಕಪ್ ಗೆದ್ದು ಕೊಟ್ಟ ಕಪಿಲ್ ದೇವ್, ಎರಡೆರಡು ವಿಶ್ವಕಪ್ ಗೆದ್ದು ಕೊಟ್ಟ ಎಂ.ಎಸ್ ಧೋನಿ, ಬ್ಯಾಟಿಂಗ್ ಸಾಮ್ರಾಟ ಸಚಿನ್ ತೆಂಡೂಲ್ಕರ್, ಆಧುನಿಕ ಕ್ರಿಕೆಟ್ ದಿಗ್ಗಜ ವಿರಾಟ್ ಕೊಹ್ಲಿ.. ಇವರೆಲ್ಲಾ ಚಿನ್ನದ ಚಮಚವನ್ನು ಬಾಯಲ್ಲಿಟ್ಟುಕೊಂಡು ಹುಟ್ಟಿದವರಲ್ಲ. ಅಷ್ಟೂ ಮಂದಿ ಮಧ್ಯಮ ವರ್ಗ ಅಥವಾ ಕೆಳ ಮಧ್ಯಮ ವರ್ಗದ ಕುಟುಂಬದ ಹಿನ್ನೆಲೆಯಿಂದ ಬಂದವರು. ಇವರೆಲ್ಲಾ ತಮ್ಮ ಸೀಮೆಯಲ್ಲಿ ಮಾಡಿದ ಸಾಧನೆ, ಏರಿದ ಎತ್ತರವಿದೆಯಲ್ಲಾ.. ಎಲ್ಲವೂ ಒಂದೊಂದು ಚರಿತ್ರೆ. ಇವರದ್ದೇ ಸಾಲಿನಲ್ಲಿ ನಿಲ್ಲುವವನು ರೋಹಿತ್ ಶರ್ಮಾ.

ನಿನ್ನೆ ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ Rohit Sharma Stand ಅನಾವರಣ ಕಾರ್ಯಕ್ರಮದಲ್ಲಿ ರೋಹಿತ್ ಮಾತನಾಡುತ್ತಿದ್ದಾಗ ವೇದಿಕೆಯ ಮುಂಭಾಗದಲ್ಲಿ ಕೂತಿದ್ದ ತಂದೆ ಗುರುನಾಥ್ ಶರ್ಮಾ ಮತ್ತು ತಾಯಿ ಪೂರ್ಣಿಮಾ ಶರ್ಮಾ ಕಣ್ಣೀರಾಗಿದ್ದರು. ಅವರ ಕಣ್ಣೀರಿಗೆ ಕಾರಣ, ತಮ್ಮ ಮುಂದೆ ಭಾರತದ ಕ್ರಿಕೆಟ್ ದಿಗ್ಗಜನಾಗಿ ನಿಂತಿದ್ದ ಮಗ ಅಲ್ಲಿವರೆಗೆ ತಲುಪುವ ಹಾದಿಯಲ್ಲಿ ಅನುಭವಿಸಿದ ಕಷ್ಟಗಳು.

ರೋಹಿತ್ ಶರ್ಮಾ ಥಾಣೆಯ ದೊಂಬಿವಿಲಿಯವನು. ಮಾತೃಭಾಷೆ ತೆಲುಗು. ತಾಯಿ ಪೂರ್ಣಿಮಾ ಶರ್ಮಾ ಆಂಧ್ರಪ್ರದೇಶದ ವಿಶಾಖಪಟ್ಟಣದವರು. ತಂದೆ ಗುರುನಾಥ್ ಶರ್ಮಾ ಟ್ರಾನ್ಸ್'ಪೋರ್ಟ್ ಕಂಪನಿಯೊಂದರ ಉಗ್ರಾಣದ ಉಸ್ತುವಾರಿಯಾಗಿದ್ದವರು. ಬೆರಳೆಣಿಕೆಯ ಸಾವಿರಗಳ ಲೆಕ್ಕದಲ್ಲಿ ಸಂಬಳ ಪಡೆಯುತ್ತಿದ್ದ ತಂದೆ.

ಕಣ್ಣ ಮುಂದೆಯೇ ಗವಾಸ್ಕರ್, ತೆಂಡೂಲ್ಕರ್'ರಂತಹ ದಿಗ್ಗಜರಿರುವಾಗ ಮುಂಬೈ ಹುಡುಗರಿಗೆ ಕ್ರಿಕೆಟ್ ಹುಚ್ಚು ಹಿಡಿಯದಿರಲು ಸಾಧ್ಯವೇ ಇಲ್ಲ. ಹಾಗೆ ಕ್ರಿಕೆಟ್ ಗೀಳು ಅಂಟಿಸಿಕೊಂಡವನು ರೋಹಿತ್ ಶರ್ಮಾ. ಆದರೆ ಮಗನನ್ನು ಕ್ರಿಕೆಟ್ ಆಡಿಸುವಷ್ಟು ಶಕ್ತಿ ತಂದೆಗಿರಲಿಲ್ಲ. ದೊಂಬಿವಿಲಿಯ ಸಿಂಗಲ್ ರೂಮ್'ನಲ್ಲಿ ಬದುಕಿದ್ದ ಕೆಳ ಮಧ್ಯಮ ವರ್ಗದ ಕುಟುಂಬ. ಮಗನಿಗೋ, ಕ್ರಿಕೆಟ್ ಆಡಲೇಬೇಕೆಂಬ ಹಠ.

ರೋಹಿತ್ ಶರ್ಮಾನನ್ನು ಹತ್ತಾರು ವರ್ಷಗಳಿಂದ ತುಂಬಾ ಹತ್ತಿರದಿಂದ ನೋಡಿರುವ ಮುಂಬೈನ ಪತ್ರಕರ್ತ ಗೆಳೆಯನೊಬ್ಬನ ಬಳಿ ಕೆಲ ವರ್ಷಗಳ ಹಿಂದೆ ಮಾತನಾಡುತ್ತಿದ್ದಾಗ ಆತ ರೋಹಿತ್'ನ ಜೀವನದ ಕಥೆ ಹೇಳಿದ್ದ.

ಮಗ ಕ್ರಿಕೆಟ್ ಆಡುವುದು ತಂದೆಗೆ ಇಷ್ಟವೇ ಇರಲಿಲ್ಲ. ಕಾರಣ, ಮಗನ ಕನಸನ್ನು ಈಡೇರಿಸಲಾಗದ ಅಸಹಾಯಕತೆ. ಮಗ ಹಠಮಾರಿ. ಅವನಿಗೆ ಕ್ರಿಕೆಟ್ ಆಡಬೇಕು ಅಷ್ಟೇ..

ತಂದೆಯೊಂದಿಗೆ ಮುನಿಸಿಕೊಂಡು ದೊಂಬಿವಿಲಿಯಿಂದ 47 ಕಿ.ಮೀ ದೂರದ ಬೊರಿವಾಲಿಯಲ್ಲಿದ್ದ ಚಿಕ್ಕಪ್ಪನ ಮನೆಗೆ ಬರುತ್ತಾನೆ.

11 ವರ್ಷದ ಹುಡುಗ.. ಕ್ರಿಕೆಟ್ ಆಡಲೇಬೇಕೆಂದು ಬಂದವನು. ಹುಡುಗನ ಕನಸಿಗೆ ಬೆನ್ನೆಲುಬಾಗಿ ನಿಂತ ಚಿಕ್ಕಪ್ಪ, ದಿನೇಶ್ ಲಾಡ್ ಎಂಬ ಕ್ರಿಕೆಟ್ ಕೋಚ್ ನಡೆಸುತ್ತಿದ್ದ ಅಕಾಡೆಮಿಗೆ ರೋಹಿತ್'ನನ್ನು ಸೇರಿಸುತ್ತಾರೆ. ಹೀಗೆ ಶುರುವಾಗಿದ್ದ ಕ್ರಿಕೆಟ್ ಪಯಣದಲ್ಲಿ ರೋಹಿತ್ ಶರ್ಮಾ ಸಾಕಷ್ಟು ಬಾರಿ ಬಿದ್ದಿದ್ದಾನೆ, ಎದ್ದಿದ್ದಾನೆ. ಒಂದೇ ಒಂದು ಕ್ರಿಕೆಟ್ ಕಿಟ್'ಗಾಗಿ ಹಣ ಹೊಂದಿಸಲು ಬೊರಿವಲಿ ಬೀದಿಗಳಲ್ಲಿ ಹಾಲು ಮಾರಿದ್ದ. ಹಾಲಾಹಲವನ್ನೇ ಕುಡಿದ ಅನುಭವ ನೀಡುವಂಥ ಕಷ್ಟಗಳನ್ನು ಎದುರಿಸಿದ್ದ.

ಮುಂಬೈನ ಐತಿಹಾಸಿಕ ವಾಂಖೆಡೆ ಕ್ರೀಡಾಂಗಣದಲ್ಲಿ ಆಡಲು ತವಕಿಸುತ್ತಿದ್ದ ಹುಡುಗನ ಹೆಸರಲ್ಲಿ ಅದೇ ವಾಂಖೆಡೆಯಲ್ಲೊಂದು stand. ಸಾಧನೆಯೆಂದರೆ ಇದು.

ರೋಹಿತ್ ಶರ್ಮಾನ ಆಟ ನೋಡಿದಾಗಲೆಲ್ಲಾ 'ಬ್ಯಾಟಿಂಗ್ ಇಷ್ಟು ಸುಲಭವೇ' ಎಂಬ ಭಾವನೆ ಹುಟ್ಟಿಕೊಳ್ಳುತ್ತದೆ. ಅವನ ಆಟ ಅಷ್ಟು ಸರಳ, ಅಷ್ಟೇ ಲೀಲಾಜಾಲ. ಅದರಲ್ಲೂ ಅವನು ಬಾರಿಸುವ ಫುಲ್ ಶಾಟ್'ಗಳು. ಬಹುಶಃ ಆಸ್ಟ್ರೇಲಿಯಾದ ರಿಕಿ ಪಾಂಟಿಂಗ್ ಅವರ ನಂತರ ರಿಣಟಟ,ಃರಣಗಳನ್ನು ಅದ್ಭುತವಾಗಿ ಬಾರಿಸಿದ ಕ್ರಿಕೆಟರ್ ಯಾರಾದರೂ ಇದ್ದರೆ ಅದು ರೋಹಿತ್ ಶರ್ಮಾ.

ವಿರಾಟ್ ಕೊಹ್ಲಿ ಪ್ರತೀ ದಿನ ನಿರಂತರ ಕಲಿಕೆಯ ಮೂಲಕ ಕ್ರಿಕೆಟ್ skillಗಳನ್ನು develop ಮಾಡಿಕೊಂಡು ಇವತ್ತಿಗೆ ಸರ್ವಶ್ರೇಷ್ಠನೆನಿಸಿಕೊಂಡವನು. ಆದರೆ ರೋಹಿತ್ ಶರ್ಮಾ ಹಾಗಲ್ಲ. ಅವನದ್ದು natural talent. ಆಫ್'ಸ್ಪಿನ್ನರ್ ಆಗಿದ್ದ ರೋಹಿತ್ ಬ್ಯಾಟಿಂಗ್'ನಲ್ಲಿ ತೋರಿಸುತ್ತಿದ್ದ ಕೌಶಲ್ಯಗಳನ್ನು ಕಂಡು full time ಬ್ಯಾಟರ್ ಆಗುವಂತೆ ಪ್ರೇರೇಪಿಸಿದವರು ಬಾಲ್ಯದ ಕೋಚ್ ದಿನೇಶ್ ಲಾಡ್. ಬರಿಗೈಯಲ್ಲಿ ಬಂದ ರೋಹಿತ್'ಗೆ ಕ್ರಿಕೆಟ್ ಪಾಠವನ್ನಷ್ಟೇ ಹೇಳಿ ಕೊಟ್ಟಿದ್ದಲ್ಲ, ಅವನ ಅಷ್ಟೂ ಕಷ್ಟಗಳಿಗೆ ಆಸರೆಯಾಗಿ, ಪ್ರಶ್ನೆಗಳಿಗೆ ಉತ್ತರವಾಗಿ ನಿಂತ ಗುರು.


ಇವತ್ತಿಗೆ ರೋಹಿತ್ ಶರ್ಮಾ ವೈಟ್ ಬಾಲ್ ಕ್ರಿಕೆಟ್'ನಲ್ಲಿ ಆಧುನಿಕ ಕ್ರಿಕೆಟ್ ದಿಗ್ಗಜರಲ್ಲೊಬ್ಬ. He is one of the greatest ODI opening batters of all time. ಭಾರತಕ್ಕೆ ಒಂದೇ ವರ್ಷದ ಅವಧಿಯಲ್ಲಿ ಎರಡು ಐಸಿಸಿ ಟ್ರೋಫಿಗಳನ್ನು ಗೆಲ್ಲಿಸಿ ಕೊಟ್ಟಿರುವ ನಾಯಕ. ಕ್ರಿಕೆಟಿಗನಾಗುವ ಕನಸು ಕಾಣುವ ಮಧ್ಯಮ ವರ್ಗದ ಹುಡುಗರ ಅತೀ ದೊಡ್ಡ ಸ್ಫೂರ್ತಿಗಳಲ್ಲಿ ರೋಹಿತ್ ಶರ್ಮಾ ಕೂಡ ಒಬ್ಬ. ಅವನ ಆಟವನ್ನೇ ನೋಡುತ್ತಾ ಕ್ರಿಕೆಟ್ ಕಲಿತು ಇವತ್ತಿಗೆ ಮುಂಬೈ ತಂಡದಲ್ಲಿ ಆಡುತ್ತಿರುವ ಹುಡುಗರ ದೊಡ್ಡ ದಂಡೇ ಇದೆ. ಅವರೆಲ್ಲರ ಪಾಲಿಗೆ ರೋಹಿತ್ ಶರ್ಮಾ ಪ್ರೀತಿಯ 'ಭಯ್ಯಾ'.

ಮುಂಬೈ ಪರ ಆಡುವ ಕನಸು ಕಂಡವನ ಹೆಸರು ಇವತ್ತು ವಾಂಖೆಡೆ ಕ್ರೀಡಾಂಗಣದ ಒಂದು ಗ್ಯಾಲರಿಯಲ್ಲಿ ರಾರಾಜಿಸುತ್ತಿದೆ. ಅಜಿತ್ ವಾಡೇಕರ್, ಸುನಿಲ್ ಗವಾಸ್ಕರ್, ದಿಲೀಪ್ ವೆಂಗ್ಸರ್ಕರ್, ಸಚಿನ್ ತೆಂಡೂಲ್ಕರ್ ಸಾಲಿನಲ್ಲಿ ರೋಹಿತ್ ಶರ್ಮಾ ಹೆಸರು.. ತಂದೆಯ ವಿರೋಧ ಕಟ್ಟಿಕೊಂಡು ಹಠ ಹಿಡಿದು ಕ್ರಿಕೆಟ್ ಆಡಿದವನಿಗೆ ಅದೇ ತಂದೆಯ ಮುಂದೆ ಮುಂಬೈ ಕ್ರಿಕೆಟ್ ಸಂಸ್ಥೆಯಿಂದ ಅತೀ ದೊಡ್ಡ ಗೌರವ.. ಅಪ್ಪ-ಅಮ್ಮ ಕೈಯಿಂದಲೇ Rohit Sharma Stand ಅನಾವರಣ, ರೋಹಿತ್ ಪಾಲಿಗೆ ಸಂದ ಮತ್ತೊಂದು ಗೌರವ.

ಅಪ್ಪ-ಅಮ್ಮನಿಂದ ದೂರವೇ ಇದ್ದು ಕ್ರಿಕೆಟ್ ಕಲಿತು ಆಡಿದವನು.. ದೇಶದ ಅತೀ ದೊಡ್ಡ ಕ್ರಿಕೆಟ್ ಹೀರೋಗಳಲ್ಲಿ ಒಬ್ಬನೆನಿಕೊಂಡವನು. ಮಗನ ಜೀವನದಲ್ಲಿ ನಡೆದ ಅಷ್ಟೂ ಘಟನೆಗಳು ಒಂದು ಕ್ಷಣ ಕಣ್ಣ ಮುಂದೆ ಬಂದವೋ ಏನೋ.. ಕಣ್ಣೀರಾದ ತಂದೆಯ ಜೊತೆ ತಾಯಿಯೂ ಕಣ್ಣೀರಾದರು. ಅದನ್ನು ನೋಡಿ ನೆನಪಾಗಿದ್ದು ಡಾ.ರಾಜ್'ಕುಮಾರ್ ಹಾಡಿದ ಅದೊಂದು ಸಾಲು.

"ನಿನ್ನ ಕಂಗಳ ಬಿಸಿಯ ಹನಿಗಳು ನೂರು ಕಥೆಯ ಹೇಳಿವೆ"

**-ಸುದರ್ಶನ್**




8ನೇ ಪುಟದಿಂದ....

## ಮಾಹಿತಿ ಹಕ್ಕು

ಆದರೆ ಆ ಏಜೆನ್ಸಿಗಳು ನಾಗರಿಕರ ವೈಯಕ್ತಿಕ ದತ್ತಾಂಶವನ್ನು ಪಡೆಯಲು ಅವಕಾಶ ಇದ್ದು ನಾಗರಿಕರ ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ನಾಗರಿಕರ ವೈಯಕ್ತಿಕ ದತ್ತಾಂಶದ ರಕ್ಷಣೆಯ ಹೊಣೆಯಿಂದ ತಪ್ಪಿಸಿಕೊಳ್ಳಲು ಸರ್ಕಾರಕ್ಕೆ ಅನುವು ಮಾಡಿಕೊಡುತ್ತದೆಂಬ ಅನುಮಾನವು ಸಾರ್ವಜನಿಕರಲ್ಲಿ ಪತ್ರಿಕಾ ರಂಗದಲ್ಲಿ ಮತ್ತು ಮಾಧ್ಯಮಗಳಲ್ಲಿ ಪ್ರತಿಧ್ವನಿಸಿ ಸಂಶಯ ಮೂಡಿದೆ. ಸರ್ಕಾರದ ಯಾವುದೇ ಪ್ರಾಧಿಕಾರವು ದತ್ತಾಂಶವನ್ನು ಬಳಕೆ ಮಾಡಿಕೊಂಡ ನಂತರದಲ್ಲಿ ಅದನ್ನು ಅಳಿಸಿಹಾಕುವ ಹೊಣೆ ಹೊರಬೇಕಿಲ್ಲ ಎಂದೂ ಕಾಯ್ದೆಯು ಹೇಳುತ್ತದೆ. ಇದರಿಂದಾಗಿ ಸರ್ಕಾರದ ಏಜೆನ್ಸಿಗಳಿಗೆ ವೈಯಕ್ತಿಕ ದತ್ತಾಂಶಗಳನ್ನು ಅನಿರ್ದಿಷ್ಟ ಅವಧಿಗೆ ಇರಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಇದನ್ನು ವ್ಯಕ್ತಿಗಳ ವಿರುದ್ಧ ದುರ್ಬಳಕೆ ಮಾಡಿಕೊಳ್ಳುವ ಸಾಧ್ಯತೆ ಇರುವುದರಿಂದ ಮತ್ತು ಆರ್‌ಟಿಐ ಕಾಯ್ದೆಯನ್ನು ಸರ್ಕಾರವು ಹಲವು ಕ್ರಮಗಳ ಮೂಲಕ ನಿಧಾನವಾಗಿ ದುರ್ಬಲಗೊಳಿಸಿತ್ತೆಂಬ ಮತ್ತು ಆರ್‌ಟಿಐ ಕಾಯ್ದೆಗೆ ತಿದ್ದುಪಡಿ ತರಲು ಪ್ರಸ್ತಾವನೆಯಿದೆಯೆಂಬ ಗಾಢ ಅನುಮಾನ ಮತ್ತು ಗಾಳಿಸುದ್ದಿ ಇರುವುದರಿಂದ, ದತ್ತಾಂಶ ಸುರಕ್ಷತಾ ಕಾಯ್ದೆಯಲ್ಲಿನ ಈ ಅಂಶವನ್ನು ಸರ್ಕಾರವು ಮತ್ತೊಮ್ಮೆ ಪರಿಶೀಲಿಸಿ ಈ ಅನುಮಾನ ನಿವಾರಿಸಿ ಪರಮಾರ್ಶಿಸಲು ಕ್ರಮಕೈಗೊಳ್ಳಬೇಕು. ಅಲ್ಲದೆ, ದತ್ತಾಂಶ ಸುರಕ್ಷತಾ ಕಾಯ್ದೆಯ ಯಾವುದೇ ಅಂಶವು ಖಾಸಗಿತನದ ಹಕ್ಕಿಗೆ ಧಕ್ಕೆ ತರದಂತೆ ಭಾರತದ ಪ್ರಜೆಗಳಿಗೆ ಖಾತರಿಪಡಿಸಬೇಕು. ಇಲ್ಲದಿದ್ದರೆ ಮಾಹಿತಿ ಹಕ್ಕು ಕಾಯ್ದೆಯ ಉದ್ದೇಶ ಸಂಪೂರ್ಣವಾಗಿ ಈಡೇರುವುದಿಲ್ಲ.

# ಜೀತದಾಳಿನಿಂದ ಹೊರಬಂದು ಹಲವು ತಾಯಂದಿರ ಬಾಳಿಗೆ ಮಾದರಿಯಾದ ಈ 'ತಾಯಮ್ಮ'!



**ತಾ**ಯಂದಿರ ದಿನ ಅಂದರೆ ಕೇವಲ ಬೊಕ್ಕೆ, ಹೂಗುಚ್ಛ, ಉಡುಗೊರೆ ನೀಡುವ ದಿನ ಮಾತ್ರವಲ್ಲ. ನಮ್ಮನ್ನು ರಕ್ಷಿಸಲು, ಪೋಷಿಸಲು ಮತ್ತು ನಮ್ಮನ್ನು ಬಲಿಷ್ಠ ವ್ಯಕ್ತಿಗಳಾಗಿ ಬೆಳೆಸಲು ಸಮಾಜದಲ್ಲಿ ಎಲ್ಲಾ ರೀತಿಯಲ್ಲೂ ಹೋರಾಡುವ ಬಲಿಷ್ಠ ಮಹಿಳೆಯರಿಗೆ ಗೌರವ, ವಂದನೆ ಸಲ್ಲಿಸುವ ದಿನ ಇದಾಗಿದೆ.

ತಾಯಮ್ಮ ಎಂಬ ಮಹಿಳೆಯ ಕಥೆಯು ಪ್ರಪಂಚದ ಪ್ರತಿಯೊಂದು ಮೂಲೆಯ ತಾಯಂದಿರ ಸಹಿಷ್ಣುತೆ ಮತ್ತು ತ್ಯಾಗಕ್ಕೆ ಅಂತಹ ಒಂದು ಸಾಕ್ಷಿಯಾಗಿದೆ. ಮೈಸೂರು ಜಿಲ್ಲೆಯ ಹುಣಸೂರು ತಾಲೂಕಿನ ಒಂದು ಸಣ್ಣ ಹಳ್ಳಿಯಿಂದ ಬಂದ ತಾಯಮ್ಮ ಅವರಿಗೆ ಮೂವರು ಮಕ್ಕಳಿದ್ದಾರೆ : ಇಬ್ಬರು ಗಂಡು ಮತ್ತು ಒಬ್ಬ ಮಗಳು. 33 ವರ್ಷ ವಯಸ್ಸಿನ ತಾಯಮ್ಮ, ತನ್ನ ಮಕ್ಕಳು ತನ್ನ ರೀತಿ ಕಷ್ಟಪಡದೆ ಚೆನ್ನಾಗಿ ಬೆಳೆಯಬೇಕೆಂದು ನಿರ್ಧರಿಸಿ ಸ್ವಂತ ಮನೆ ಕಟ್ಟಿಸಿಕೊಳ್ಳಲು 60 ಸಾವಿರ ರೂಪಾಯಿ ಅಡ್ವಾನ್ಸ್ ಪಡೆದರು. ಅದು ಅವರ ಜೀವನವನ್ನೇ ತಲೆಕೆಳಗಾಗಿಸಿತು. ಅವರ ಪತಿ ಮೂರ್ತಿ ಒಂದು ಸಣ್ಣ ಕನಸು ಕಂಡಿದ್ದರು. ಬಾಲ್ಯದಿಂದಲೂ, ಅವರು ಸ್ವಂತ ಮನೆ ಕಟ್ಟಲು ಬಯಸಿದ್ದರು. ತಾವು ವಾಸಿಸುತ್ತಿದ್ದ ಪ್ರದೇಶವು ಮೂಲಭೂತ ನೈರ್ಮಲ್ಯವನ್ನು ಹೊಂದಿಲ್ಲ. ಮಕ್ಕಳಿಗೆ ಉತ್ತಮ ಭವಿಷ್ಯ ಕಲ್ಪಿಸುವ ಭರವಸೆಯಲ್ಲಿ ತೆಗೆದುಕೊಂಡ ಅಡ್ವಾನ್ಸ್ ಹಣವನ್ನು ವಾಪಸ್ ನೀಡಲಾಗದೆ ಸಾಲವನ್ನು ಮರುಪಾವತಿಸಲು ಸಾಧ್ಯವಾಗದೆ ದಂಪತಿ ಜೀತ ಕಾರ್ಮಿಕರಾಗಿ ಜಮೀನುದಾರರ ಹತ್ತಿರ ಸಿಲುಕಿದರು. ತಾಯ್ಮಮ್ಮ ತಮ್ಮ ಪತಿ ಮೂರ್ತಿ ಜೊತೆ 2015–17ರಲ್ಲಿನ ತಮ್ಮ ಸಂಕಷ್ಟವನ್ನು ನೆನಪಿಸಿಕೊಳ್ಳುವ ತಾಯಮ್ಮ ಹಿಂದೆ ಪತಿ ಕೆಲಸಕ್ಕೆ ಹೋದಾಗ ಮಧ್ಯಾಹ್ನ ನಂತರ ಮಕ್ಕಳನ್ನು ಕಬ್ಬಿನ ಗದ್ದೆಗೆ ಒಯ್ದು ತಾನು ಕೆಲ ಮಾಡಿ ಸಂಸಾರದ ನೇಗಿಲನ್ನು ಹೊತ್ತು ಜೀವನ ಮುಂದುವರಿಸಿದರು.

ತಮ್ಮ ಸಮಸಾರವು ಜೀತದಾಳುಗಳಾಗಿ ದುಡಿಯುವಾಗ ಮಕ್ಕಳು ಅನಾರೋಗ್ಯಕ್ಕೆ ಒಳಗಾದಾಗ, ಪೋಷಕರಲ್ಲಿ ಒಬ್ಬರು ಅವರನ್ನು ಕ್ಲಿನಿಕ್‌ಗೆ ಕರೆದೊಯ್ಯಬಹುದು, ಇನ್ನೊಬ್ಬರು ಕೆಲಸ ಮಾಡುವುದನ್ನು ಮುಂದುವರಿಸಬೇಕು, ಹಲವು ಸಂದರ್ಭಗಳಲ್ಲಿ ಪುರುಷರು ಮಾಡುವಂತೆ ಮಹಿಳೆಯರು ಕೆಲಸ ಮಾಡಬೇಕಾಗುತ್ತದೆ ಎಂದು ಅಂದಿನ ಕಷ್ಟದ ದಿನಗಳನ್ನು ನೆನಪಿಸಿಕೊಳ್ಳುತ್ತಾರೆ.

ತಾಯಿಯಾಗಿ ನನ್ನ ಮಕ್ಕಳಿಗೆ ಆರೋಗ್ಯಕರ ಆಹಾರ ಮತ್ತು ಬಟ್ಟೆಗಳನ್ನು ಒದಗಿಸುವ ಮೂಲಭೂತ ಕರ್ತವ್ಯಗಳನ್ನು ಪೂರೈಸಲು ಸಾಧ್ಯವಾಗಲಿಲ್ಲ. ಹಾಗೂ ತುಂಬಾ ತೊಂದರೆಯಾಗಿ ನೋವು ಅನುಭವಿಸಿದರು. ಸಾಮಾಜಿಕ ವಲಯಗಳಲ್ಲಿ ತಮ್ಮ ಸಂಸಾರದ ಚಲನವಲನವನ್ನು ಸಹ ನಿರ್ಬಂಧಿಸಲಾಗಿತ್ತು. ಕುಟುಂಬ ಕಾರ್ಯಕ್ರಮಗಳಿಗೆ ಭೇಟಿ ನೀಡಲು ಸಹ ಸಾಧ್ಯವಾಗಲಿಲ್ಲ ಎನ್ನುತ್ತಾರೆ. 2017ರಲ್ಲಿ ತಾಯಮ್ಮ ಮತ್ತು ಮೂರ್ತಿ ಅವರ ಐದು ಸದಸ್ಯರ ಕುಟುಂಬವನ್ನು ನಿರ್ದಯಿ ಮಾಲೀಕರ ಹಿಡಿತದಿಂದ ಮುಕ್ತಗೊಳಿಸಲಾಯಿತು. ಈಗ, ಅವರು ತಮ್ಮ ಸ್ವಂತ ಮನೆಯನ್ನು ಹೊಂದಿದ್ದಾರೆ, ಎಳನೀರು ವ್ಯಾಪಾರ ಮಾಡುತ್ತಿದ್ದಾರೆ.

ತಾಯಮ್ಮ ಉದಯೋನ್ಮುಖ ಟ್ರಸ್ಟ್ ಮೂಲಕ ಇತರರೊಂದಿಗೆ ಜೀತದಾಳುದಿಂದ ಬಿಡುಗಡೆ ಮಾಡಲು ಆ ದಿನಗಳು ನೆನಪಾಗಿರುತ್ತದೆ. ಇಂದು ತಮ್ಮ ಮಕ್ಕಳು ಅವರ ಅಧ್ಯಯನ ದತ್ತ ಗಮನ ಹರಿಸಿ ಉತ್ತಮ ಪ್ರಜೆಗಳಾಗಬೇಕೆಂದು ನಾನು ಬಯಸುತ್ತೇನೆ. ಅವರು ಏನನ್ನು ಸಾಧಿಸಲು ಬಯಸುತ್ತಾರೆ. ಅಥವಾ ಇನ್ನೊಂದು ರೀತಿಯಲ್ಲಿ ಅವರು ಸಮಾಜಕ್ಕೆ ಸೇವೆ ಸಲ್ಲಿಸಬೇಕು ಎಂಬುದು ತಮ್ಮ ಆಸೆ ಎನ್ನುತ್ತಾರೆ. ಇಂದು, ತಾಯಮ್ಮ ಅವರು ಸ್ವತಂತ್ರ ಮತ್ತು ಸ್ವಾವಲಂಬನೆ ಉದ್ಯಮಿಯಾಗಿದ್ದು, ಇತರ ಬಿಡುಗಡೆಯಾಧ ಜೀತ ಕಾರ್ಮಿಕರ ಜೊತೆಗೆ ಉದಯೋನ್ಮುಖ ಟ್ರಸ್ಟ್‌ನ ಮೂಲಕ ಸಹಾಯ ಮಾಡುತ್ತಾರೆ. ಕರಕುಶಲ ವಸ್ತುಗಳನ್ನು ಮಾರಾಟ ಮಾಡುವ ಮೂಲಕ ಇನ್ನೊಬ್ಬ ಜೀತದಾಳು ಮುಕ್ತ ಕಾರ್ಮಿಕರ ಜೀವನಕ್ಕೆ ಧ್ವನಿಯಾಗಿದ್ದಾರೆ. ಹೊಲಿಗೆ ಕೆಲಸ ಮಾಡುತ್ತಾರೆ. ಮತ್ತು ಹೊಲಿಗೆಗೆ ಒಲವು ಹೊಂದಿರುವ ಧೈರ್ಯಶಾಲಿ ಮಹಿಳೆಯರಿಗೆ ಸ್ಫೂರ್ತಿಯಾಗಿದ್ದಾರೆ. ಇಂದು ತಾಯಂದಿರ ದಿನದ ಸಂದರ್ಭದಲ್ಲಿ ತಾಯಮ್ಮ ಪ್ರತಿ ಮಗುವೂ ತನ್ನ ತಾಯಿಯನ್ನು ಗೌರವಿಸಬೇಕು. ತಾಯಿಯ ಪ್ರೀತಿ ಮತ್ತು ವಾತ್ಸಲ್ಯವು ಪ್ರಪಂಚದಲ್ಲಿ ಅತ್ಯಂತ ಪರಿಶುದ್ಧ ಮತ್ತು ಆಳವಾದದ್ದು, ಅವಳು ದಣಿವರಿಯಿಲ್ಲದೆ ತ್ಯಾಗ ಮಾಡುತ್ತಾಳೆ ಮತ್ತು ಅವಳ ಮಕ್ಕಳಿಗೆ ಆಧಾರವಾಗುತ್ತಾಳೆ ಎಂದು ಅಭಿಪ್ರಾಯಪಡುತ್ತಾರೆ.

## ಕವನ....



*ಮೊದಲ ಮಳೆಯ ಸಿಂಚನಕೆ ಅರಳಿ ನಿಂತಿದೆ ಭೂ ವನ*
*ಮೊದಲ ಪ್ರೀತಿ ಸಂಭ್ರಮಕೆ ತೋಯ್ದು ಹೋಯ್ತು ಈ ಮನ*
*ಮಳೆಯು ಗೀಚಿದೆ ಹಸಿರೆಲೆಗಳ ಮೇಲೆ ಹನಿಗವನಗಳ ಸಾಲು,*
*ಈ ಮನದ ತುಂಬೆಲ್ಲಾ ಕನಸುಗಳ ಚಿಗುರು,*
*ಸೋನೆ ಮಳೆಯು ಹನಿಗಳಷ್ಟೇಯಾದರೂ,*
*ಕಾದು ನಿಂತ ಬರಡು ನೆಲಕೆ ಎಂದೂ ಬತ್ತದ ಪ್ರೀತಿಯೊರತೆಯು.*
*ಹನಿಗಳು ಅಷ್ಟೇ ಜೋರು ಮಳೆಯಲ್ಲ ಆದರೂ ಸಾಕು*
*ಜೀವನ ಸವೆಸಲು ನೆನಪುಗಳೇ ಮಧುರ.*



ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಸಂಸದರಾದ ತೇಜಸ್ವಿ ಸೂರ್ಯರವರು ಭಾರತೀಯ ವಿಜ್ಞಾನ ಸಂಸ್ಥೆಯ ವಾರ್ಷಿಕ ಆಡಳಿತ ಸಭೆಗೆ ಭಾಗವಹಿಸಿದ್ದ ದೃಶ್ಯಗಳು.



# ಮೇ 15ರಿಂದ ಗ್ರೇಟರ್ ಬೆಂಗಳೂರು ಜಾರಿ



2006 ರಿಂದ ಅಸ್ತಿತ್ವದಲ್ಲಿ ಇದ್ದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಮೇ 2025ರ 15ನೇ ತಾರೀಖಿನಿಂದ ಗ್ರೇಟರ್ ಬೆಂಗಳೂರು ಪ್ರಾಧಿಕಾರವಾಗಿ ಉನ್ನತೀಕರಿಸಲಾಗಿದೆ. ಬಿಬಿಎಂಪಿ ವ್ಯಾಪ್ತಿಯ ಪ್ರದೇಶವನ್ನು ಗ್ರೇಟರ್ ಬೆಂಗಳೂರು ಪ್ರದೇಶ ಎಂದು ಪರಿಗಣಿಸಲು ಹಾಗೂ ಗ್ರೇಟರ್ ಬೆಂಗಳೂರು ಆಡಳಿತ ಕಾಯಿದೆಯನ್ನು ಮೇ 15ರಿಂದ ಜಾರಿಗೊಳಿಸಲು ಮೇ 09ರಂದು ನಡೆದ ಸಚಿವ ಸಂಪುಟ ಒಪ್ಪಿಗೆ ನೀಡಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪ್ರದೇಶವು ಗ್ರೇಟರ್ ಬೆಂಗಳೂರು ಪ್ರದೇಶವಾಗಿ ಪರಿವರ್ತನೆಯಾಗಲಿದೆ. ಹಾಲಿ ಈಗ ಇರುವ 8 ವಲಯಗಳು ಮತ್ತು 625 ಚದರ ಕಿ.ಮೀ. ವಿಸ್ತೀರ್ಣವನ್ನು ವಿಸ್ತರಿಸಿ ಗ್ರೇಟರ್ ಬೆಂಗಳೂರು ಆಡಳಿತ ಕಾಯಿದೆಯನ್ನು ಜಾರಿಗೊಳಿಸಲು ಅಂತಿಮವಾಗಿ ಸರ್ಕಾರವು ನಿರ್ಧರಿಸಿ ಆಡಳಿತ ಕಾಯಿದೆ ಅನುಷ್ಠಾನಗೊಳಿಸಿದೆ.

ಗ್ರೇಟರ್ ಬೆಂಗಳೂರು ಪ್ರಾಧಿಕಾರದಲ್ಲಿ ಬೆಂಗಳೂರು ಅಭಿವೃದ್ಧಿ ಸಚಿವರು ಉಪಾಧ್ಯಕ್ಷರಾಗಿರುತ್ತಾರೆ. ಗ್ರೇಟರ್ ಬೆಂಗಳೂರು ವ್ಯಾಪ್ತಿಯ ಶಾಸಕರು-ಸಚಿವರು, ನಗರಾಭಿವೃದ್ಧಿ ಸಚಿವರು, ಪಾಲಿಕೆಗಳ ಮೇಯರ್‌ಗಳು, ಬಿಡಿಎ ಆಯುಕ್ತ, ಬೆಂಗಳೂರು ಜಲಮಂಡಳಿ, ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ, ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ, ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ, ಕಂದಾಯ ಜಿಲ್ಲೆಯ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಪೊಲೀಸ್ ಮಿಷನರ್, ಬೆಂಗಳೂರು ಮಹಾನಗರ ಭೂಸಾರಿಗೆ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ ವ್ಯವಸ್ಥಾಪಕ ನಿರ್ದೇಶಕ, ರಾಜ್ಯ ಅಗ್ನಿಶಾಮಕ ಮತ್ತು ತುರ್ತುಸೇವೆಗಳ ನಿರ್ದೇಶಕ, ನಗರ ಭೂಸಾರಿಗೆ ನಿರ್ದೇಶನಾಲಯದ ಆಯುಕ್ತ, ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಮಹಾನಗರ ಆಯುಕ್ತ ಸದಸ್ಯರಾಗಲಿದ್ದಾರೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯ ಆಯುಕ್ತರ ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ.

ಹಾಲಿ ಬಿಬಿಎಂಪಿ ವ್ಯಾಪ್ತಿಯಲ್ಲಿರುವ ನಗರದ ಕೈಗಾರಿಕಾ ಪ್ರದೇಶಗಳಲ್ಲದೆ ಎಲೆಕ್ಟ್ರಾನಿಕ್ ಸಿಟಿ, ಅತ್ತಿಬೆಲೆ, ಜಿಗಣಿ ಕೈಗಾರಿಕೆ ಪ್ರದೇಶ, ಬೊಮ್ಮಸಂದ್ರ, ಸರ್ಜಾಪುರ, ಬಾಗಲೂರು, ರಾಜಾನುಕುಂಟೆ, ಹೆಸರಘಟ್ಟ, ದಾಸನಪುರ,



ಮಾಕಳಿ, ತಾವರೆಕೆರೆ, ಕುಂಬಳಗೋಡು, ಕಗ್ಗಲಿಪುರ, ಹಾರೋಹಳ್ಳಿಯನ್ನು 'ಗ್ರೇಟರ್ ಬೆಂಗಳೂರು ಪ್ರದೇಶ'ಕ್ಕೆ ಸೇರಿಸಿಕೊಂಡು ಕನಿಷ್ಠ ಮೂರು ಪಾಲಿಕೆ ರಚನೆಯಾಗುವ ಸಾಧ್ಯತೆ ಇದೆ ಎಂದು ಬಲ ಮೂಲಗಳಿಂದ ತಿಳಿದುಬಂದಿರುತ್ತದೆ.

'ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ'ಯನ್ನು ಮೇ 15 ರಂದು ಜಾರಿಗೊಳಿಸುವಂತೆ ನಗರಾಭಿವೃದ್ಧಿ ಇಲಾಖೆ ಬುಧವಾರ ಅಧಿಸೂಚನೆ ಹೊರಡಿಸಿದೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರ ಆಡಳಿತ ವಹಿಸಿಕೊಳ್ಳುವವರೆಗೆ ಬಿಬಿಎಂಪಿ ಮುಂದುವರೆಯಲಿದೆ.

ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ ಜಾರಿಯಾದ ಮೇಲೆ ಮುಖ್ಯಮಂತ್ರಿಯವರ ನೇತೃತ್ವದ 'ಗ್ರೇಟರ್ ಬೆಂಗಳೂರು ಪ್ರಾಧಿಕಾರ' (ಜಿಬಿಎ) 120 ದಿನಗಳಲ್ಲಿ ರಚನೆಯಾಗಲಿದೆ. ಆಡಳಿತಾಧಿಕಾರಿ ನೇಮಕಗೊಳ್ಳಲಿದ್ದಾರೆ. ಗ್ರೇಟರ್ ಬೆಂಗಳೂರು ಪ್ರದೇಶ (ಜಿಬಿಎ) ಗಡಿ ಗುರುತು ನಡೆಯಲಿದೆ. ಅನಂತರ ನಿಧಾನವಾಗಿ ಬಿಬಿಎಂಪಿ ಅಸ್ತಿತ್ವ ಕಳೆದುಕೊಳ್ಳಲಿದೆ.

ಬೆಂಗಳೂರಿನ ವಿಸ್ತರಣೆ ಮತ್ತು ವ್ಯಾಪ್ತಿ ಹಿಗ್ಗಿಸಿ ಬೃಹತ್ ಕೈಗಾರಿಕೆಗಳಿಗೆ ಮತ್ತು ಅಂತರ ರಾಷ್ಟ್ರೀಯ ಐಟಿಬಿಟಿ ಕಂಪನಿಗಳಿಗೆ ಅನುವು ಮಾಡಿಕೊಡಲು ಈ ವಿಸ್ತರಣೆಯಿಂದ ಉಪಯೋಗವಾಗಬಹುದು ಎಂಬ ಸರ್ಕಾರದ ಚಿಂತನೆಯಲ್ಲಿ ರಚನಾತ್ಮಕ ಮತ್ತು ಕಾನೂನಾತ್ಮಕ ತೊಡಕುಗಳು ಮುಂದೆ ಬರುವ ಸಾಧ್ಯತೆ ಇದ್ದು ಇವೆಲ್ಲವೂ ಬೆಂಗಳೂರನ್ನು ಅಭಿವೃದ್ಧಿ ಪಥಕ್ಕೆ ಕೊಂಡೊಯ್ಯ ಬಹುದೇ ಎಂಬುದನ್ನು ಕಾದು ನೋಡಬೇಕಾಗಿದೆ.



# ಮೈಸೂರ್ ಸ್ಯಾಂಡಲ್ ವಿವಾದ: ನಟಿ ತಮನ್ನ ರಾಯಭಾರಿಕೆಗೆ 6 ಕೋಟಿ



ಜಗತ್ತಿನಾದ್ಯಂತ ಗಂಧದ ಸಾಬೂನು ಎಂದು ಪ್ರಸಿದ್ಧಿ ಹೊಂದಿದ ಮೈಸೂರು ಸ್ಯಾಂಡಲ್ ಸಾಬೂನು ನಮ್ಮ ಕರ್ನಾಟಕದ ಹೆಮ್ಮೆ. ಈ ಸಾಬೂನು ಕೇವಲ ಕರ್ನಾಟಕದಲ್ಲಿ ಅಷ್ಟೇ ಅಲ್ಲ. ವಿದೇಶದಲ್ಲಿಯೂ ಸಿಕ್ಕಾಪಟ್ಟೆ ಜನಪ್ರಿಯತೆ ಪಡೆದಿದ್ದು ಇಂದಿಗೂ ಈ ಸಾಬೂನು ಭಾರತೀಯರು ಇರುವ ಕಡೆಗಳಲ್ಲೆಲ್ಲಾ ಬೇಡಿಕೆ ಹೆಚ್ಚಿದೆ. 1918ರಿಂದ ಬೆಂಗಳೂರಿನಲ್ಲಿ ತಯಾರಾಗುವ ಈ ಸಾಬೂನು ತನ್ನ ಬ್ರ್ಯಾಂಡ್ ಅನ್ನು ಇನ್ನೂ ಹೆಚ್ಚಿನ ವಹಿವಾಟು ವೃದ್ಧಿಸುವ ನಿಟ್ಟಿನಲ್ಲಿ ಬಹುಭಾಷಾ ನಟಿ ತಮನ್ನಾ ಭಾಟಿಯಾರನ್ನು ಕರ್ನಾಟಕ ಸರ್ಕಾರ ಸಾಬೂನು ಉತ್ಪನ್ನದ ಬ್ರ್ಯಾಂಡ್ ಅಂಬಾಸಿಡರ್ ಆಗಿ ಮಾಡಿದೆ. 2 ವರ್ಷ 2 ದಿನ ಬ್ರಾಂಡ್ ಅಂಬಾಸಿಡರ್ ಆಗುವುದಕ್ಕೆ ತಮನ್ನಾ ಅವರಿಗೆ ರೂ.6.20 ಕೋಟಿ ರೂಪಾಯಿ ಸಂಭಾವನೆಯನ್ನು ನೀಡಿ ಅವರ ಒಪ್ಪಿಗೆ ಪಡೆದಿದ್ದಾರೆ. ಕಳೆದ ಕೆಲವು ದಿನಗಳಿಂದ ತಮನ್ನಾ ಭಾಟಿಯಾರನ್ನು ಮೈಸೂರು ಸ್ಯಾಂಡಲ್ ಸೋಪ್‌ಗೆ ರಾಯಬಾರಿ ಮಾಡುವ ಬಗ್ಗೆ ಚರ್ಚೆ ನಡೆಯುತ್ತಿತ್ತು. ಇದು ಅವರ ಅಭಿಮಾನಿಗಳಿಗೆ ಖುಷಿ ತರುವ ವಿಷಯವಾದರೂ ಕರ್ನಾಟಕ ಸರ್ಕಾರವೇ ಮಿಲ್ಕಿ ಬ್ಯೂಟಿಗೆ ನೀಡಿದ ಸಂಭಾವನೆಯು ವಿವಾದಕ್ಕೆ ಎಡೆಮಾಡಿಕೊಟ್ಟಿದೆ.

ದಕ್ಷಿಣ ಭಾರತದಲ್ಲಿ ಜನರು ಮಿಲ್ಕಿ ಬ್ಯೂಟಿ ಎಂದು ಬಾಯ್ತುಂಬ ಕರೆಯುತ್ತಿದ್ದ ಜನಪ್ರಿಯ ನಟಿ ತಮನ್ನಾ ಭಾಟಿಯಾರವರನ್ನು ಈ ಮೊತ್ತಕ್ಕೆ ರಾಯಭಾರಿಯನ್ನಾಗಿ ಮಾಡಿರುವುದು ದಕ್ಷಿಣ ಭಾರತದ ಅದರಲ್ಲೂ ಕನ್ನಡ ಚಿತ್ರ ನಟಿಯರಿಗೆ ಇರುಸು-ಮುರುಸು ಉಂಟು ಮಾಡಿದೆ. ಈ ವಿಷಯವನ್ನು ವಿವಾದಾತ್ಮಕವಾಗಿ ಪರಿವರ್ತನೆಯಾಗದಿರಲು ಕರ್ನಾಟಕ ಸರ್ಕಾರದ ಸಚಿವರು ಮತ್ತು ಸಾಬೂನು ಕಂಪನಿಯ ಅಧಿಕಾರಿಗಳು ತಮನ್ನಾ ಅವರ ಜನಪ್ರಿಯತೆ ಮತ್ತು ಉತ್ತರ ಭಾರತ ಮತ್ತು ವಿದೇಶಿಗಳಲ್ಲಿ ನಮ್ಮ ಸಾಬೂಬಿನ ಜನಪ್ರಿಯತೆಯು ಇನ್ನಷ್ಟು, ಮತ್ತಷ್ಟು ಹೆಚ್ಚಿಗೆ ಜನಪ್ರಿಯ ಹೊಂದಿ ವ್ಯಾಪಾರ ಹೊಂದಿ ವೃದ್ಧಿಸುವ ನಿಟ್ಟಿನಲ್ಲಿ ಈ ಮೊತ್ತಕ್ಕೆ ರಾಯಭಾರಿಕೆಯನ್ನು ಒಪ್ಪಿಸಲಾಗಿದೆ ಎಂದು ಸಮಜಾಯಿಷಿ ನೀಡಿರುತ್ತಾರೆ. ತಮನ್ನಾ ಭಾಟಿಯಾ ಕ್ರೇಜ್/ಜನಪ್ರಿಯತೆ ದಕ್ಷಿಣ ಚಿತ್ರರಂಗದ ಸಿನಿಮಾಗಳು ಕಡಿಮೆ ಆದರೂ, ಜಾಲತಾಣಗಳಲ್ಲಿ ಮತ್ತು ಹಿಂದಿ ಸಿನಿಮಾಗಳಲ್ಲಿ ಜನಪ್ರಿಯತೆ ಕಡಿಮೆಯಾಗಿಲ್ಲ. ಭಾರತದಾದ್ಯಂತ ಕ್ರೇಜಿ ಅಭಿಮಾನಿಗಳನ್ನು ಹೊಂದಿರುವ ತಮನ್ನಾ ಭಾಟಿಯಾ ಬಾಲಿವುಡ್‌ಗೆ ಹೋಗಿದ್ದರೂ ವಿವಾದಗಳ ಮಧ್ಯದಲ್ಲಿಯೇ ತಮನ್ನಾ ಭಾಟಿಯಾ ಅವರನ್ನು ವಿಶ್ವದಾದ್ಯಂತ ಜನಪ್ರಿಯವಾಗಿರುವ ಮೈಸೂರು ಸ್ಯಾಂಡಲ್ ಸೋಪ್‌ನ ರಾಯಭಾರಿಯಾಗಿ ಆಯ್ಕೆ ಒಪ್ಪಂದ ಮಾಡಿಕೊಂಡು ಆದೇಶ ಹೊರಡಿಸಿ ವಿವಾದಕ್ಕೆ ತೆರೆ ಎಳೆದಿದ್ದಾರೆ. ಆದರೆ ತಮನ್ನಾರ ಜನಪ್ರಿಯತೆ ಮತ್ತು ಮೈಸೂರು ಸ್ಯಾಂಡಲ್ ಸಾಬೂನು ವ್ಯಾಪಾರ ವೃದ್ಧಿ ಎಷ್ಟರಮಟ್ಟಿಗೆ ಫಲ ನೀಡುತ್ತದೆಂಬುದು ಮುಂದಿನ ವರ್ಷಗಳಲ್ಲಿ ಕಾದು ನೋಡಬೇಕಾಗಿದೆ.




ಮೈದುಂಬಿ ಹರಿಯುತ್ತಿರುವ ಜೋಗ ಜಲಪಾತ

# ಐದು ದಶಕಗಳ ಅನಂತ್ ಸಿನಿ ಪಯಣ


# ಅನಂತ್‌ನಾಗ್‌ಗೆ ಒಲಿದ ಪದ್ಮಭೂಷಣ ಪ್ರಶಸ್ತಿ



**ಕ**ನ್ನಡ ಚಿತ್ರರಂಗ ಕಂಡ ಅಪ್ರತಿಮ ಅಭಿನಯ ಮತ್ತು ಸ್ಫುರದ್ರೂಪಿ ನಾಯಕ ನಟರಲ್ಲಿ 70ರ ದಶಕದ ನಂತರ ಕಾಣಿಸಿಕೊಂಡ ಡಾ. ರಾಜ್‌ಕುಮಾರ್ ಮತ್ತು ವಿಷ್ಣುವರ್ಧನ್, ಅಂಬರೀಶ್ ನಂತರ ಅನಂತ್‌ನಾಗ್ ಎಲ್ಲಾ ಚಿತ್ರಪ್ರೇಮಿಗಳ ಗಮನ ಸೆಳೆದಿದ್ದಾರೆ. ಐದು ದಶಕಗಳ ಕನ್ನಡ ಚಿತ್ರರಂಗದ ಪಯಣದಲ್ಲಿ ಅನಂತ್‌ನಾಗ್ ಮುಕ್ತ ಮನಸ್ಸಿನಿಂದ ಮತ್ತು ಸಾರ್ಥಕ ಕಲಾಸೇವೆಯಿಂದ ತಮ್ಮನ್ನು ಚಿತ್ರಜೀವನಕ್ಕೆ ಅರ್ಪಿಸಿಕೊಂಡಿದ್ದಾರೆ. ನಾಯಕನಲ್ಲದೆ ಹಲವಾರು ವಿವಿಧ ಪೋಷಕ ಪಾತ್ರಗಳಲ್ಲೂ ಹಾಸ್ಯ ನಟನೆಯೊಂದಿಗೆ ನಟಿಸಿ ಸೈ ಎನಿಸಿಕೊಂಡು, ಭಾರತದ ಚಲನಚಿತ್ರ ರಂಗದಲ್ಲಿ ತನ್ನದೇ ಆದ ಛಾಪು ಮೂಡಿಸಿದ್ದಾರೆ. ಇವರ ಅಗಾಧವಾದ ಪ್ರತಿಭೆ, ಗ್ಲಾಮರ್ ಮತ್ತು ಪಾತ್ರಕ್ಕೆ ತಕ್ಕ ಅಭಿನಯ ಎಲ್ಲವೂ ಅವರನ್ನು ಮೇರುನಟನನ್ನಾಗಿ ರೂಪಿಸಿತ್ತು. ಪಾರ್ವತಮ್ಮ ರಾಜ್‌ಕುಮಾರ್‌ರವರು ಬಿಡುವಿಲ್ಲದ ರಾಜ್‌ಕುಮಾರ್ ಬದಲಾಗಿ 70 ದಶಕದ ನಂತರ ಕಾದಂಬರಿ ಚಿತ್ರಗಳಿಗೆ ಅನಂತ್‌ನಾಗ್ ಅನ್ನು ನಾಯಕರನ್ನಾಗಿ ಮಾಡಿ ಚಿತ್ರ ನಿರ್ಮಿಸಲು ಶಿಫಾರಸ್ಸು ಮಾಡಿರುತ್ತಾರೆ. ಇದು ಇವರ ಅಪ್ರತಿಮ ಪ್ರತಿಭೆಗೆ ಸಾಕ್ಷಿ.



ಈ ಐದು ದಶಕಗಳಲ್ಲಿ ಹಲವಾರು ಉತ್ತಮ ಚಿತ್ರಗಳಲ್ಲಿ ಅಭಿನಯಿಸಿ ಕರ್ನಾಟಕ ಮತ್ತು ದಕ್ಷಿಣ ಭಾರತವಲ್ಲದೆ ಕೇಂದ್ರ ಸರ್ಕಾರದ ಚಿತ್ರಪ್ರಶಸ್ತಿಗಳನ್ನು ಪಡೆದಿರುತ್ತಾರೆ. ಇವರ ಜೀವನವು ಚಿತ್ರರಂಗದ ಒಂದು ಭಾಗವಲ್ಲದೇ ರಾಜಕೀಯದಲ್ಲೂ ಮತ್ತು ರಂಗಭೂಮಿಯಲ್ಲೂ ತಮ್ಮ ಛಾಪನ್ನು ಮೂಡಿಸಿರುತ್ತಾರೆ.




ಕೇಂದ್ರ ಸರ್ಕಾರವು ಕೊಡಮಾಡುವ ಪದ್ಮಪ್ರಶಸ್ತಿಗಳಲ್ಲಿ ಒಂದಾದ ಪದ್ಮಭೂಷಣ ಪ್ರಶಸ್ತಿಯು 2025ನೇ ಸಾಲಿನಲ್ಲಿ ಅನಂತ್‌ನಾಗ್ ಅವರನ್ನು ಸನ್ಮಾನಿಸುವ ಮೂಲಕ ಭಾರತ ಚಿತ್ರರಂಗದ ಅದರಲ್ಲೂ ವಿಶೇಷವಾಗಿ ಕರ್ನಾಟಕ ಚಿತ್ರರಂಗದ ಅನಂತ್‌ನಾಗ್ ಅವರಿಗೆ ನೀಡುವ ಮೂಲಕ ತನ್ನ ಹಿರಿಮೆಯನ್ನು ಹೆಚ್ಚಿಸಿಕೊಂಡಿದೆ. ಇದೊಂದು ಐತಿಹಾಸಿಕ ಮತ್ತು ಕನ್ನಡ ಚಿತ್ರರಂಗಕ್ಕೆ ಹೆಮ್ಮೆಯ ಗರಿಮೆ ತಂದಿದೆ.

# ಐಪಿಎಲ್ ಸಂಭ್ರಮ ಮತ್ತು ಸರ್ಕಾರದ ವೈಫಲ್ಯ

4ನೇ ಪುಟದಿಂದ....

ಅಭಿವಾನಿಗಳು ಒಂದೇ ಬಾರಿಗೆ ಜಮಾವಣೆಯಾಗುವ ಮತ್ತು ಒಳಗೆ ನುಗ್ಗುವ ಪ್ರಯತ್ನ ಮಾಡಿದ ಕಾರಣ, ವಿಧಾನಸೌಧದ ಮುಂದೆ ಹೈಕೋರ್ಟ್ ಪ್ರಾಂಗಣದಲ್ಲಿ ಮತ್ತು ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಹಸ್ರ ಸಂಖ್ಯೆಯಲ್ಲಿ ಅಭಿಮಾನಿಗಳು ನೆರೆದರೆ ಘೋರ ದುರಂತವೇ ನಡೆದು ಹೋಗಬಹುದೆಂಬ ಆರೋಪ ಕೇಳಿ ಬಂದಿತ್ತು. ಹೀಗಿದ್ದಾಗಲೇ ಪರಿಸ್ಥಿತಿ ಭಿನ್ನವಾಗಿ ನಿರೀಕ್ಷೆಗೂ ಮೀರಿ ಜನ ಜಮಾವಣೆಯಾಗಿ ವಿಧಾನಸೌಧದ ಎದುರು 50 ಅಡಿ ಮರಗಳಲ್ಲಿ ಆರ್‌ಸಿಬಿ ಅಭಿಮಾನಿಗಳು ಹತ್ತಿ ಕುಳಿತುಕೊಳ್ಳುವ ಮಟ್ಟ ತಲುಪಿತು. ಈ ಬೆಂಗಳೂರು ಅಭಿಮಾನಿಯ ವಿಡಿಯೋ ಕೂಡ ವೈರಲ್ ಆಗಿತ್ತು.


ಆಯೋಜಕರಿಗಾಗಲಿ, ಭದ್ರತಾ ವ್ಯವಸ್ಥೆ ನೋಡಿಕೊಳ್ಳುವ ಅಧಿಕಾರಿಗಳಿಗಾಗಲಿ ಲಕ್ಷಾಂತರ ಜನ ಸೇರುವ ಬಗ್ಗೆ ಒಂದಿಷ್ಟೂ ಮುನ್ನೆಚ್ಚರಿಕೆ ಊಹೆ ಇಲ್ಲದ ಕಾರಣ ಮತ್ತು ವಿಧಾನಸೌಧದ ಎದುರು ನಡೆಯಲಿರುವ ಕಾರ್ಯಕ್ರಮಕ್ಕೆ ಹೋಗಿಯೇ ತೀರಬೇಕೆಂದು ಹಟಕ್ಕೆ ಬಿದ್ದ ಅಭಿಮಾನಿಗಳ ಉನ್ಮಾದ, ಇದರಿಂದ ಬಸ್ಸು, ಸ್ವಂತ ವಾಹನ, ದ್ವಿಚಕ್ರ, ಲಾರಿ ಹಿಡಿದು ದೌಡಾಯಿಸಿದ್ದರಿಂದ ಮೆಟ್ರೊ ರೈಲಂತೂ ಜನಸಾಗರವನ್ನೇ ತುಂಬಿಕೊಂಡು ವಿಧಾನಸೌಧ ಹಾಗೂ ಚಿನ್ನಸ್ವಾಮಿ ಕ್ರೀಡಾಂಗಣದತ್ತ ಜನ ಸುನಾಮಿಯನ್ನೇ ಚಿಮ್ಮಿಸಿತು. ಸರಾಸರಿ 5 ನಿಮಿಷಕ್ಕೆ ಒಂದು ಬಾರಿ ಚಲಿಸುವ ಮೆಟ್ರೊ ಅಂದು, ಎರಡು ನಿಮಿಷಕ್ಕೆ ಒಂದರಂತೆ ಸಂಚರಿಸಿ ಜನರನ್ನು ಹೊತ್ತು ತಂದಿತು. ಇದರಿಂದಾಗಿ, ಮೆಜೆಸ್ಟಿಕ್‌ನ ನಾಡಪ್ರಭು ಕೆಂಪೇಗೌಡ ಮೆಟ್ರೊ ನಿಲ್ದಾಣದಲ್ಲಿ ನೂಕುನುಗ್ಗಲು ಉಂಟಾಯಿತು. ಜನ ದಟ್ಟಣೆಯನ್ನು ತಡೆಯಲು ಕೊನೆಗೆ ವಿಧಾನಸೌಧ, ಕಬ್ಬನ್ ಪಾರ್ಕ್ ನಿಲ್ದಾಣಗಳಲ್ಲಿ ಮೆಟ್ರೋ ರೈಲು ನಿಲ್ಲಿಸುವುದಕ್ಕೆ ತಡೆ ನಿರ್ಬಂಧ ಹೇರಲಾಯಿತು. ಆದರೂ ಸಾವಿರಾರು ಜನ ಜಮಾವಣೆಯಾಗಿದ್ದರು.



ಅತ್ತ ಆರ್‌ಸಿಬಿ ತಂಡ ಜಯ ಗಳಿಸುತ್ತಿದ್ದಂತೆಯೇ ರಾಜ್ಯದಲ್ಲೂ ಸಂಭ್ರಮಾಚರಣೆಗಳು ರಾತ್ರಿಯಿಡೀ ನಡೆದಿದ್ದವು. ರಾತ್ರಿಯಿಡೀ ಬಂದೋಬಸ್ತ್ ನಡೆಸಿದ್ದ ಪೊಲೀಸರು ಬೆಳಗಿನ ಜಾವದ ಸುಮಾರಿಗೆ ಮನೆಗೆ ಹೋಗಿ ನಿದ್ರೆಗೆ ಜಾರಿದ್ದರು. ಅದೇ ಹೊತ್ತಿನೊಳಗೆ, ಅದೇ ದಿನ ವಿಜಯೋತ್ಸವ ಆಚರಿಸಬೇಕೆಂಬ ತೀರ್ಮಾನವೂ ಹೊರಬಿದ್ದು ಭದ್ರತಾ ಸಿಬ್ಬಂದಿಯನ್ನು ನೇಮಿಸುವಲ್ಲಿ ಗಡಿಬಿಡಿ ಮತ್ತು ಅಡಚಣೆಯಿಂದಾಗಿ ನಿರ್ದಿಷ್ಟ ಸಮಯದಲ್ಲಿ ನಿರ್ದಿಷ್ಟ ಪ್ರದೇಶಗಳಲ್ಲಿ ಸೂಕ್ತ ಬಂದೋಬಸ್ತ್ ವ್ಯವಸ್ಥೆ ಮಾಡಲು ಭದ್ರತಾ ಸಿಬ್ಬಂದಿ ಕೊರತೆಯೂ ಎದ್ದು ಕಾಣುತ್ತಿತ್ತು. ಇದು ಸಂಪೂರ್ಣವಾಗಿ ಸರ್ಕಾರದ ಗುಪ್ತಚರ ಇಲಾಖೆಯ ವೈಫಲ್ಯವನ್ನು ಎತ್ತಿ ತೋರಿಸುತ್ತಿತ್ತು. ಇದನ್ನು ಮುಂದಾಲೋಚಿಸದೆ ಮುಂಜಾಗ್ರತೆ ಕ್ರಮವನ್ನು ತೆಗೆದುಕೊಳ್ಳದೇ ಇರುವುದು ಸಂಪೂರ್ಣವಾಗಿ ಸರ್ಕಾರದ ಯಂತ್ರಾಂಗ ವಿಫಲವಾಗಿ ಮಾಧ್ಯಮ ಬಾತ್ಮಿದಾರರ ಪ್ರಶ್ನೆಗಳಿಗೆ ಉತ್ತರ ಕೊಡುವಲ್ಲಿ ಸರ್ಕಾರ ಮುಜುಗರ ಮತ್ತು ಇರಿಸು ಮುರಿಸು ಪಡುವಂತಾಯಿತು.

ಇಂತಹ ಸಮಯದಲ್ಲೇ ಕನ್ನಡಿಗರ ರಾಜಧಾನಿ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ, ಆರ್‌ಸಿಬಿ ಕಪ್ ಗೆದ್ದ ಖುಷಿಯಲ್ಲಿ ಸಾವಿರಾರು ಅಭಿಮಾನಿಗಳು ಕ್ರೀಡಾಂಗಣದ ಒಳಗೆ ನುಗ್ಗಲು ಪ್ರಯತ್ನಿಸಿ ಹಲವಾರು ಗೇಟುಗಳಲ್ಲಿ ಸಾಗರದಂತೆ ಮುನ್ನುಗ್ಗುತ್ತಿರುವ ಜನಸಮೂಹವು ಒಬ್ಬರ ಮೇಲೆ ಒಬ್ಬರು ಬೀಳುತ್ತ ಒಳಗೆ ನುಗ್ಗಲು ಪ್ರಯತ್ನಿಸಿ ಭದ್ರತಾ ಸಿಬ್ಬಂದಿ ಲಾಠಿ ಚಾರ್ಜ್ ಮಾಡುವ ಮಟ್ಟಕ್ಕೆ ಪರಿಸ್ಥಿತಿ ವಿಕೋಪಕ್ಕೆ ಹೋಗಿ ಗೇಟುಗಳು ಮುರಿದುಬಿದ್ದು ಕಾಲ್ತುಳಿತವಾಗಿ 11 ಜನ ಕಾಲ್ತುಳಿತದಲ್ಲಿ ಜೀವ ಕಳೆದುಕೊಂಡು ಸಾವನ್ನಪ್ಪಿದ್ದರು.

18 ವರ್ಷದ ಬಳಿಕ ಕಪ್ ಗೆದ್ದು 'ನಮ್ದು' ಎಂದು ಬೀಗಿದ ಆರ್‌ಸಿಬಿ ತಂಡಕ್ಕೆ ಜೂನ್ 4 ರಂದು ವಿಧಾನಸೌಧದ ಎದುರು ನಡೆದ ಸನ್ಮಾನ, ಚಿನ್ನಸ್ವಾಮಿ ಕ್ರೀಡಾಂಗಣದೊಳಗೆ ಹಮ್ಮಿಕೊಂಡ ಸಂಭ್ರಮಾಚರಣೆ ಜನಸಾಗರದ ಕಾಲ್ತುಳಿತಕ್ಕೆ ದಾರಿ ಮಾಡಿಕೊಟ್ಟು, ಸಾವಿನ ಮನೆಯ ಬಾಗಿಲನ್ನು ತೆರೆಯಿತು. ಅನಾಹುತಕ್ಕೆ ಯಾರು ಹೊಣೆ ಎಂದು ಹುಡುಕುತ್ತಾ ಹೊರಟರೆ ಸಾವಿನ ಮನೆಗೆ ಅಭಿಮಾನಿಗಳನ್ನು ದೂಡಿದವರು ಯಾರೆಂಬ ಹಲವು ಎಳೆಗಳು ಬಿಚ್ಚಿಕೊಳ್ಳುತ್ತಾ ಕೊನೆಗೆ ನ್ಯಾಯಾಂಗ ತನಿಖೆಗೆ ಸರ್ಕಾರವು ನಿರ್ಧರಿಸಿತು. ಅಭಿಮಾನಿಗಳಲ್ಲಿ ಭುಗಿಲೆದ್ದ ಜಯದ ಉನ್ಮಾದ, ವಿವೇಚನಾರಹಿತ ತೀರ್ಮಾನ, ಹೆಜ್ಜೆ ಹೆಜ್ಜೆಗೂ ನಡೆದ ಪ್ರಮಾದ, ಅಸಹಾಯಕರಾಗಿ ನಿಲ್ಲಬೇಕಾದ ಪೊಲೀಸರ ಸ್ಥಿತಿ. ಇವೆಲ್ಲವೂ ಸೇರಿ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ವಿಜಯದ ಸಂತೋಷವು ನಾಡಿನ ಚರಿತ್ರೆಯ ಸಂಭ್ರಮದ ದಿನವೊಂದು ಕರಾಳ ನೆನಪಾಗಿ ಉಳಿಯುವಂತಹ ಘೋರ ದುರಂತವಾಗಿ ಮಾರ್ಪಟ್ಟಿತು.



Former UK Prime Minister Rishi Sunak, The lucky Charm and celebrating RCB's victory

Editor, Printer, Publisher and Owned by Tulasidevi K S # 555, 17th Cross, SBM Colony, Srinivasanagar, Banashankari, Bengaluru-560050.
Printed At : M/s Apoorva Printers & Publishers, 179, Suggata Road, H.M. Halli, Bengaluru-562157, Editor Tulasidevi K S